# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ –296 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಕೆಎ/ಎಸ್‌ಕೆ/ಸಿಟಿಎ–874/2024–2026 | ಚಿತ್ರದುರ್ಗ | ದಿನಾಂಕ:20–06–2025 ಶುಕ್ರವಾರ | ಪುಟ: 4 | ಬೆಲೆ : ರೂ.2–00
Volume - 02 Issue - 296 | RNI No: KARKAN/2023/88462 | KA/SK/CTA-874/2024-2026 | Chitradurga | Date: 20-06-2025 Friday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಅವಧಿ ಮೀರಿದ ಗೊಬ್ಬರ ಸರಬರಾಜು: ಜೆಡಿ ಅವನತ್ತುಗೊಳಿಸಬೇಕೆಂದು ಆಗ್ರಹ 2

21 ರಂದು 3000 ಜನರಿಂದ ಯೋಗ ಪ್ರದರ್ಶನ: ಜಿಲ್ಲಾಧಿಕಾರಿ 3

ನನ್ನ ಅಪ್ಪನಿಗೆ ಶುಭಾಶಯಗಳನ್ನು ಹೇಗೆ ಹೇಳಲಿ? 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಹಿಂದುಳಿದ ವರ್ಗದ ಕಾನೂನು ಪದವೀಧರರಿಂದ ಅರ್ಜಿ

» ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗ–1, 2ಎ, 3ಬಿ, ವರ್ಗಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರನ್ನು ನ್ಯಾಯಾಂಗ ತರಬೇತಿ ಯೋಜನೆಯಡಿ 2025–26ನೇ ಸಾಲಿನಲ್ಲಿ ಆಯ್ಕೆ ಮಾಡಲು ಖಾಲಿ ಇರುವ 10 ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜುಲೈ 15 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ಇರುವ ನಿಬಂಧನೆಗಳು: ಅಭ್ಯರ್ಥಿಯು ವರ್ಗ–1, 2ಎ, 3ಬಿ, ವರ್ಗಕ್ಕೆ ಸೇರಿದ ಅಭ್ಯರ್ಥಿಗಳಾಗಿರಬೇಕು. ಆಯ್ಕೆ ಮಾಡಲಾಗುವ ಒಟ್ಟಾರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಲ್ಲಿ ಶೇ.33.33 ರಷ್ಟು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿಡಲಾಗುವುದು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಹಿಂದೆ ಎರಡು ವರ್ಷಗಳಗೊಳಗಾಗಿ ಅಭ್ಯರ್ಥಿಯು ಕಾನೂನು ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಸರ್ಕಾರಿ ಆದೇಶದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ 2ಎ, 3ಎ, 3ಬಿ ವರ್ಗಗಳ (ಅಲ್ಪ ಸಂಖ್ಯಾತರ ಜಾತಿಗಳನ್ನು ಹೊರತುಪಡಿಸಿ) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ವಾರ್ಷಿಕ ಆದಾಯ ರೂ. 2,50,000/– ಹಾಗೂ ಪ್ರವರ್ಗ–1 ಅಭ್ಯರ್ಥಿಗಳು ರೂ.3,50,00 ಗಳ ಆದಾಯ ಮೀರಿಬಾರದು. ಅರ್ಜಿದಾರರು ಬೇರೆ ಇಲಾಖೆಯಿಂದ ತರಬೇತಿ ಭತ್ಯೆ ಪಡೆಯುತ್ತಿದ್ದಲ್ಲಿ ಅರ್ಹರಿರುವುದಿಲ್ಲ. ಅರ್ಜಿದಾರರು ಸ್ಥಳೀಯ ಸಂಸ್ಥೆ ಹಾಗೂ ಸೊಸೈಟಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಯಾವುದೇ ಸದಸ್ಯರಾಗಿದ್ದಲ್ಲಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಹಾಗೂ ನಿಗದಿತ ಅರ್ಜಿ ನಮೂನೆಗಳನ್ನು ಪಡೆಯಲು ಚಿತ್ರದುರ್ಗ ನಗರದ ಸ್ಟೇಡಿಯಂ ರಸ್ತೆಯ ಡಿ.ದೇವರಾಜ ಅರಸು ಭವನದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

### ಹೊಲಿಗೆ ತರಬೇತಿಗೆ ಅರ್ಜಿ ಆಹ್ವಾನ

» ಚಿತ್ರದುರ್ಗ

ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ 2024–25ನೇ ಸಾಲಿನಲ್ಲಿ ಮಹಿಳಾ ತರಬೇತಿ ಯೋಜನೆಯಡಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯಿಂದ ಚಿತ್ರದುರ್ಗ ಸೇವಾ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸೊಸೈಟಿ ತರಬೇತಿ ಸಂಸ್ಥೆಯ ಮೂಲಕ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಹೊಲಿಗೆ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಚಿತ್ರದುರ್ಗ ನಗರದ ಸಂಗೊಳ್ಳಿ ರಾಯಣ್ಣ ಸರ್ಕಲ್ ಹತ್ತಿರದ ಬುರುಜನಹಟ್ಟಿ ಕ್ರಾಸ್ ಹೊಳಲ್ಕೆರೆ ರಸ್ತೆಯ ಸೇವಾ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸೊಸೈಟಿ ಸಂಸ್ಥೆಗೆ ಭೇಟಿ ನೀಡಿ ನಿಗಧಿತ ಅರ್ಜಿ ನಮೂನೆಯನ್ನು ಪಡೆದು, ಭರ್ತಿ ಮಾಡಿ ಅರ್ಜಿಯನ್ನು ಇತ್ತೀಚಿನ ಭಾವಚಿತ್ರ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಇದೇ ಜೂನ್ 25 ರೊಳಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸೇವಾ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸೊಸೈಟಿ ದೂರವಾಣಿ ಸಂಖ್ಯೆ 8310509334 ಅನ್ನು ಸಂಪರ್ಕಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್ ತಿಳಿಸಿದ್ದಾರೆ.

### ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆ

» ಚಿತ್ರದುರ್ಗ

ಜಿಲ್ಲಾ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯನ್ನು ಇದೇ ಜೂನ್ 24ರಂದು ಬೆಳಿಗ್ಗೆ 11ಕ್ಕೆ ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಎನ್.ಆರ್.ಮಹೇಶ್ವರಪ್ಪ ಸಭೆಯ ಅಧ್ಯಕ್ಷತೆ ವಹಿಸುವರು. ಸಭೆಗೆ ಜಿಲ್ಲಾ ಕೃಷಿಕ ಸಮಾಜದ ಜಿಲ್ಲಾ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಭಾಗವಹಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಹಿರಿಯ ನಾಗರಿಕರ ಪ್ರಕರಣಗಳ ವಿಚಾರಣೆಗೆ ಪ್ರಾಧಾನ್ಯತೆ: ನ್ಯಾಯಾಧೀಶ ವಿಜಯ್ ಹೇಳಿಕೆ

» ಚಿತ್ರದುರ್ಗ

ನ್ಯಾಯಾಲಯಗಳಲ್ಲಿ ಹಿರಿಯ ನಾಗರಿಕರ ಪ್ರಕರಣಗಳ ವಿಚಾರಣೆಗೆ ಪ್ರಾಧಾನ್ಯತೆ ನೀಡಲಾಗುತ್ತದೆ. ಸಾಧ್ಯವಾದಷ್ಟು ವಿಚಾರಣೆಯನ್ನು 1 ವರ್ಷದ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಹೊಂಬೆಳಕು ಹಿರಿಯ ನಾಗರೀಕರ ಸಹಾಯವಾಣಿ ಕೇಂದ್ರ, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಜಿಲ್ಲಾ ಸಂಘ, ಭಾರತ ಸೇವಾ ದಳ ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ಸ್ಟೇಡಿಯಂ ರಸ್ತೆಯ ಭಾರತ ಸೇವಾ ದಳ ಕಟ್ಟಡದಲ್ಲಿ ಗುರುವಾರ ಆಯೋಜಿಸಲಾಗಿದ್ದ, ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರಿಯ ಕಾನೂನು ಸೇವೆಗಳ ಪ್ರಾಧಿಕಾರ 2016 ರಲ್ಲಿ ಹಿರಿಯ ನಾಗರಿಕರ ನೆರವು ಯೋಜನೆಯನ್ನು ಜಾರಿಗೊಳಿಸಿದೆ. ಜಿಲ್ಲಾ ಮಟ್ಟದಲ್ಲಿ ಹಿರಿಯ ನಾಗರಿಕರಿಗೆ ಕಾನೂನು ನೆರವು ಒದಗಿಸಲು ನಾಲ್ಕು



ವಕೀಲರನ್ನು ನೇಮಿಸಲಾಗಿದೆ. ರಾಜ್ಯ ಸರ್ಕಾರ 2007 ರಲ್ಲಿ ಹಿರಿಯರ ನಾಗರಿಕ ಪಾಲನೆ ಪೋಷಣೆ ಮತ್ತು ಕಲ್ಯಾಣ ಅಧಿನಿಯಮ ಜಾರಿಗೊಳಿಸಿದೆ. ಇದರ ಅನ್ವಯ ಪ್ರತಿ ಉಪವಿಭಾಗಕ್ಕೆ ಒಂದು ನ್ಯಾಯಾಧೀಕರಣವನ್ನು ರಚಿಸಲಾಗಿದೆ. ಉಪವಿಭಾಗಾಧಿಕಾರಿ ಆಯಾ ಉಪವಿಭಾಗದಲ್ಲಿರುವ ಎಲ್ಲ ಹಿರಿಯ ನಾಗರಿಕರ ಕ್ಷೇಮದ ಪಾಲಕರಾಗಿರುತ್ತಾರೆ. ಮಕ್ಕಳು ಸರಿಯಾಗಿ ನೋಡಿಕೊಳ್ಳದಿದ್ದರೆ, ಆಸ್ತಿ ಪಡೆದು ವಂಚಿಸಿದರೆ ಅಥವಾ ಇನ್ಯಾಯವುದೇ ರೀತಿ ತೊಂದರೆ ಸಿಲುಕಿದರೆ ಹಿರಿಯ ನಾಗರಿಕರು ಉಪವಿಭಾಗಾಧಿಕಾರಿಗಳ ಮೊರೆ ಹೋಗಬಹುದು. ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಹಿರಿಯ ನಾಗರಿಕರ ಮಾಹಿತಿಯನ್ನು ಠಾಣೆಯಲ್ಲಿ ಸಂಗ್ರಹಿಸಬೇಕು. ತಿಂಗಳಿಗೊಮ್ಮೆ ಹಿರಿಯ ನಾಗರಿಕರ ಸಭೆ ನಡೆಸಿ ಕುಂದು ಕೊರತೆಯನ್ನು ಆಲಿಸಬೇಕು ಎಂದು ನ್ಯಾಯಾಧೀಶ ಎಂ.ವಿಜಯ್ ಹೇಳಿದರು.

ತಂದೆ ತಾಯಿಗಳು ಸ್ವಂತ ಮಕ್ಕಳಿಂದ ನಿರ್ಲಕ್ಷ್ಯಕ್ಕೆ ಅಥವಾ ವಂಚನೆಗೆ ಒಳಗಾಗಿ ಆಸರೆ ಹಾಗೂ ನ್ಯಾಯಾ ಕೋರಿ ನ್ಯಾಯಾಲಯದ ಮೊರೆ ಬರುತ್ತಾರೆ. ಇದಕ್ಕೆ ಮುಖ್ಯ ಕಾರಣ ಮಕ್ಕಳನ್ನು ಸಂಸ್ಕಾರ ಹಾಗೂ ಮೌಲ್ಯಗಳು ಇಲ್ಲದೆ ಬೆಳೆಸಿರುವುದು ಆಗಿದೆ. ಯುವ ಜನರು ತಂದೆ ತಾಯಿಗಳನ್ನು ನೋಡಿಕೊಳ್ಳುವ ನೈತಿಕ ಜವಬ್ದಾರಿ ಮರೆತು, ಅಮಾನವೀಯವಾಗಿ ವರ್ತಿಸುವುದು ಖೇದಕರ ಸಂಗತಿಯಾಗಿದೆ. ಇದನ್ನು ಸರಿಪಡಿಸಲು ಇಂದಿನ ಮಕ್ಕಳಿಗೆ ಹಿರಿಯರ ಬಗ್ಗೆ ಗೌರವ ಆದರಗಳು ಮೂಡುವಂತೆ ಸಂಸ್ಕಾರಯುತವಾಗಿ ಬೆಳೆಸುವುದು ಅಗತ್ಯವಾಗಿದೆ ನ್ಯಾಯಾಧೀಶ ಎಂ.ವಿಜಯ್ ಅಭಿಪ್ರಾಯ ವ್ಯಕ್ತಪಡಿಸಿದರು.

ವಕೀಲರ ಸಂಘದ ಅಧ್ಯಕ್ಷ ವೈ.ತಿಪ್ಪೇಸ್ವಾಮಿ ಮಾತನಾಡಿ, ಆಸ್ತಿಗೋಸ್ಕರ ತಂದೆ ತಾಯಿಯರನ್ನು ದೂರ ಮಾಡಿಕೊಳ್ಳುವ ಪ್ರಕರಣಗಳು ಸಾಕಷ್ಟು ಇವೆ. ಇಂತಹ ಸಂದರ್ಭದಲ್ಲಿ ಕಾಯ್ದೆಯ ಅನುಸಾರ ಹಿರಿಯ ನಾಗರಿಕರು ಕಾನೂನಿನ ನೆರವು ಪಡೆದುಕೊಳ್ಳಬಹುದು ಎಂದರು.

ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಜೆ.ವೈಶಾಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿ ವರ್ಷ ಜೂನ್ 15 ನ್ನು ವಿಶ್ವ ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನವಾಗಿ ಆಚರಿಸಲಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಿರಿಯ ನಾಗರಿಕರ ರಕ್ಷಣೆಗೆ ಪ್ರತ್ಯೇಕ ಕಾಯ್ದೆಗಳನ್ನು ಜಾರಿಗೊಳಿಸಿವೆ. ಕೇಂದ್ರ ಸರ್ಕಾರ ಸಹಾಯವಾಣಿ ಸಂಖ್ಯೆ 14567, ರಾಜ್ಯ ಸರ್ಕಾರ ಸಹಾಯವಾಣಿ ಸಂಖ್ಯೆ 1090 ಅನ್ನು ಹಿರಿಯ ನಾಗರಿಕರಿಗಾಗಿ ಆರಂಭಿಸಿವೆ. ಪ್ರತಿ ಜಿಲ್ಲೆಯಲ್ಲಿ ಹಿರಿಯ ಸಹಾಯ ಕೇಂದ್ರಗಳು ಕಾರ್ಯನಿರ್ವಹಿಸಿತ್ತಿವೆ. ಹಿರಿಯ ನಾಗರಿಕರು ಇವುಗಳ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

ಸಭೆಯಲ್ಲಿ ಉಪ ಕಾನೂನು ನೆರವು ಅಭಿರಕ್ಷಕ ಎಂ.ಮೂರ್ತಿ ಹಿರಿಯ ನಾಗರಿಕರ ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಜಿಲ್ಲಾ ಸಂಘ ಅಧ್ಯಕ್ಷ ಪ್ರೇಮನಾಥ್, ಗೌರವ ಅಧ್ಯಕ್ಷ ರಂಗಪ್ಪ ರೆಡ್ಡಿ, ಗ್ರೇಡ್–2 ತಹಶೀಲ್ದರ್ ನರಸಿಂಹಮೂರ್ತಿ, ಭಾರತ ಸೇವಾದಳ ಅರುಣ್‌ಕುಮಾರ್, ಅಣ್ಣಯ್ಯ, ಬಸವೇಶ್ವರ ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಶಂಕರಪ್ಪ ಸೇರಿದಂತೆ ಮತ್ತಿರರು ಇದ್ದರು.


### ಸಾರ್ವಜನಿಕರಿಗೆ ಸಕಾಲದಲ್ಲಿ ಉತ್ತಮ ಸೇವೆ ಸಲ್ಲಿಸಲು ಲ್ಯಾಪ್‌ಟಾಪ್ ವಿತರಣೆ

## ಸಾರ್ವಜನಿಕರ ದಾಖಲಾತಿ ಸಮಸ್ಯೆಗೆ ಉತ್ತಮಪರಿಹಾರ

» ಚಳ್ಳಕೆರೆ

ರಾಜ್ಯ ಸರ್ಕಾರ ಸಾರ್ವಜನಿಕರು ನೀಡುವ ಅನೇಕ ಸೇವೆಗಳಲ್ಲಿ ನೂತನ ಡಿಜಿಟಲೀಕರಣ ಅಳವಡಿಸುವ ಮೂಲಕ ಜನಸ್ನೇಹಿ ಸರ್ಕಾರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ಗುರುವಾರ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಕ್ಷೇತ್ರದ 27 ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿದರು. ಸರ್ಕಾರದ ಎಲ್ಲಾ ದತ್ತಾಂಶಗಳು ಇದರಲ್ಲಿವೆ, ಸಾರ್ವಜನಿಕರಿಂದಲೂ ಮಾಹಿತಿಪಡೆದು ಅವುಗಳನ್ನು ದಾಖಲಿಸಿ ನೀಡಬಹುದಾಗಿದೆ. ಯಾವುದೇ ಸಂದರ್ಭದಲ್ಲೂ ವಿಳಂಭವಿಲ್ಲದೆ



ಸಂಬಂಧಪಟ್ಟ ಎಲ್ಲಾ ನಮೂನೆದಾಖಲಾತಿಗಳು ಇದರಲ್ಲಿ ಅಡಕವಾಗಿದ್ದು ಸಾರ್ವಜನಿಕರಿಗೆ ಸುಲಭವಾಗಿ ಗ್ರಾಮ ಆಡಳಿತಾಧಿಕಾರಿಗಳು ನೀಡಬಹುದು. ಇದರಿಂದ ಸಾರ್ವಜನಿಕರ ಅಲೆದಾಟ, ಕಾಲವಿಳಂಬ, ಯಾವುದೇ ರೀತಿಯ ತೊಂದರೆ ಇಲ್ಲದೆ ಸಾರ್ವಜನಿಕರು ತಮ್ಮ ದಾಖಲಾತಿಯನ್ನು ಪಡೆಯಲು ಸಹಕಾರಿ. ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ದೂರದೃಷ್ಠಿಯ ಯೋಜನೆಗಳಲ್ಲಿ ಇದುಒಂದು ಎಂದರು.


ಪುಟ 2


## ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ರಾಹುಲ್‌ಗಾಂಧಿ ಹುಟ್ಟುಹಬ್ಬ ಆಚರಣೆ




ಚಿತ್ರದುರ್ಗ: ಸಂಸದ ರಾಹುಲ್ ಗಾಂಧಿಯವರ ಜನ್ಮ ದಿನಾಚರಣೆಯನ್ನು ಚಿತ್ರದುರ್ಗ ನಗರದ ಕಾಂಗ್ರೆಸ್ ಕಚೇರಿಯಲ್ಲಿ ಕೇಕ್ ಕತ್ತರಿಸುವುದರ ಮೂಲಕ ಆಚರಣೆಯನ್ನು ಮಾಡಲಾಯಿತು. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಕೆ. ತಾಜ್ ಪೀರ್ ರಾಹುಲ್‌ಗಾಂಧಿಯವರ ಭಾವಚಿತ್ರದ ಮುಂದೆ ಕೇಕ್ ಕತ್ತರಿಸುವುದರ ಮೂಲಕ ರಾಹುಲ್ ಗಾಂಧಿಯವರ ಹುಟ್ಟು ಹಬ್ಬವನ್ನು ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಡಿಸಿಸಿ ಪ್ರಧಾನ ಕಾರ್ಯದರ್ಶಿ ಮೈಲಾರಪ್ಪ, ಶಿಕ್ಷಕರ ಕ್ಷೇತ್ರ ಘಟಕದ ಅಧ್ಯಕ್ಷರಾದ ಮುದಸಿರ್, ರಾಮ ಪ್ರಕಾಶ್ ನಾಯ್ಕ್, ಖುದ್ದುಸ್, ಸೇವಾದಳದ ಇಂದಿರಾ, ಟಿಪ್ಪು ಖಾಸಿಂ ಆಲಿ ಸೇರಿದಂತೆ ಇತರರು ಭಾಗವಹಿಸಿದ್ದರು.

## ಪ್ರಮುಖ ಸುದ್ದಿ

# ನಗರದ ರೈಲ್ವೆಸ್ಟೇಷನ್ ಕಾಮಗಾರಿ ವೀಕ್ಷಿಸಿದ ಸಂಸದ

» ಚಿತ್ರದುರ್ಗ

ಕೇಂದ್ರ ಸರ್ಕಾರದ ಅಮೃತ ಯೋಜನೆಯಡಿ ಆರಂಭಗೊಂಡಿರುವ ನೂತನ ಕಟ್ಟಡ ಕಾಮಗಾರಿ ಯಾವಾಗಲೋ ಉದ್ಘಾಟನೆಯಾಗಬೇಕಿತ್ತು. ತಡವಾಗಿದೆ. ಡಿ. 31 ಕ್ಕೆ ಉದ್ಘಾಟನೆಯಿಟ್ಟುಕೊಳ್ಳಿ ಎಂದು ಸಂಸದ ಗೋವಿಂದಕಾರಜೋಳ ಇಂಜಿನಿಯರ್ ಹಾಗು ಗುತ್ತಿಗೆದಾರರಿಗೆ ಸೂಚಿಸಿದರು.

ರೈಲ್ವೆ ಸ್ಟೇಷನ್ ಬಳಿ ನೂತನ ಕಟ್ಟಡ ಕಾಮಗಾರಿಯನ್ನು ಗುರುವಾರ ವೀಕ್ಷಿಸಿ ಮಾತನಾಡಿದರು.

ಚಿಕ್ಕಜಾಜೂರು, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮುರು, ಬಳ್ಳಾರಿವರೆಗೆ ರೈಲ್ವೆಗೆ 3400 ಕೋಟಿ ರೂ.ಅನುದಾನ ಸಿಕ್ಕಿದೆ. ಇದರಿಂದ ಆರ್ಥಿಕ ಹಾಗೂ ವ್ಯಾಪಾರ ವಹಿವಾಟಿಗೆ ಅನುಕೂಲವಾಗುತ್ತದೆ. ಪಾವಗಡ–ಮಡಕಶಿರ ರೈಲು ಮಾರ್ಗಕ್ಕೆ 265 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ. ರಾಜ್ಯ ಸರ್ಕಾರ ತನ್ನ ಪಾಲಿನ ಸೌಲಭ್ಯಗಳನ್ನು ಒದಗಿಸಬೇಕಷ್ಟೆ. ಚಿಕ್ಕಜಾಜೂರು, ಚಿತ್ರದುರ್ಗ, ಹಳಿಯೂರು





ರೈಲ್ವೆ ಗೇಟ್‌ಗಳಿಗೆ ಕೇಂದ್ರ ಒಪ್ಪಿಗೆ ನೀಡಿದೆ. ಚಿತ್ರದುರ್ಗದಲ್ಲಿ ದಿನಕ್ಕೆ ಮೂವತ್ತು ಸಾರಿ ರೈಲ್ವೆ ಗೇಟ್ ಹಾಕುವುದರಿಂದ ಬಹಳ ತೊಂದರೆಯಾಗುತ್ತಿದೆ. ಇಲ್ಲಿ ಅಂಡರ್ ಬ್ರಿಡ್ಜ್ ನಿರ್ಮಾಣ ಕುರಿತು ಕೇಂದ್ರದ ಜೊತೆ ಮಾತನಾಡುತ್ತೇನೆ. ಚಿತ್ರದುರ್ಗ, ದಾವಣಗೆರೆಗೆ 550 ಕೋಟಿ ರೂ.ಗಳನ್ನು ನೀಡಲಾಗಿದೆ. ಐದು ಸಾವಿರ ಕೋಟಿ ರೂ.ಗಳಿಗಿಂತಲೂ ಹೆಚ್ಚು ಹಣ ಬಂದಿದೆ ಎಂದು ತಿಳಿಸಿದರು.

ನೂತನ ಕಟ್ಟಡದಲ್ಲಿ ವಾಹನಗಳ ನಿಲುಗಡೆಗೆ ಪ್ರತ್ಯೇಕ ಜಾಗವಿರಬೇಕು. 2023 ಡಿಸೆಂಬರ್‌ನಲ್ಲಿ ಆರಂಭಗೊಂಡ ಕಾಮಗಾರಿ ಇನ್ನು ಏಕೆ ಮುಗಿದಿಲ್ಲ. ತಡವಾಗುವುದು ಬೇಡ. ಚುರುಕಿನಿಂದ ಕೆಲಸವಾಗಬೇಕು. 12 ಕೋಟಿ ರೂ. ಕಾಮಗಾರಿಗೆ ಚಿತ್ರದುರ್ಗದಲ್ಲಿ ಯಾರು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಸಿಗಲಿಲ್ಲವೇ ಎಂದು ರೈಲ್ವೆ ಅಧಿಕಾರಿಯನ್ನು ಪ್ರಶ್ನಿಸಿದ ಸಂಸದ ಗೋವಿಂದ ಕಾರಜೋಳರವರು ದಾವಣಗೆರೆ, ಚಿತ್ರದುರ್ಗ, ತುಮಕೂರು ನೇರ ರೈಲು ಮಾರ್ಗ ಯೋಜನೆಗೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ಇಲ್ಲವೋ ಎನ್ನುವುದನ್ನು ಉಪವಿಭಾಗಾಧಿಕಾರಿಗೆ ಕೇಳಿ ಎಂದು ಸೂಚಿಸಿದರು.ಅಮೃತ ಭಾರತ್ ರೈಲ್ವೆ ಸ್ಟೇಷನ್ ಮಾಡಬೇಕೆಂಬುದು ದೇಶದ ಪ್ರಧಾನಿ ಮೋದಿರವರ ಕನಸು. ಕೇಂದ್ರ ಸರ್ಕಾರದಲ್ಲಿ ದುಡ್ಡಿಗೆ ತೊಂದರೆಯಿಲ್ಲ. ತುರ್ತಾಗಿ ಕಾಮಗಾರಿ ಕೆಲಸ ಪೂರ್ಣಗೊಳಿಸುವಂತೆ ಹೇಳಿದರು.

ಬಿಜೆಪಿ. ನೂತನ ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ಖಜಾಂಚಿ ಮಾಧುರಿ ಗಿರೀಶ್, ಮಾಜಿ ಅಧ್ಯಕ್ಷ ಎ.ಮುರಳಿ, ಮಾಧ್ಯಮ ವಕ್ತಾರ ದಗ್ಗೆಶಿವಪ್ರಕಾಶ್ ಈ ಸಂದರ್ಭದಲ್ಲಿ ಹಾಜರಿದ್ದರು.

## ಫಾಸ್ಟ್ ನ್ಯೂಸ್

### ದಾಖಲಾತಿ ಸಮಸ್ಯೆಗೆ ಉತ್ತಮಪರಿಹಾರ

» ಮೊದಲ ಪುಟದಿಂದ

ಪ್ರಾಸ್ತಾವಿಕವಾಗಿ ಮಾತನಾಡಿದ ತಹಶೀಲ್ದಾರ್ ರೇಹಾನ್‌ಪಾಷ, ಕಂದಾಯ ಇಲಾಖೆ ಇತಿಹಾಸದಲ್ಲಿ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುವ ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಫ್‌ಟಾಪ್ ನೀಡಿ ಆಡಳಿತದಲ್ಲಿ ಡಿಜಿಟಲೀಕರಣ ಕಾರ್ಯಕ್ಕೆ ಕಂದಾಯ ಇಲಾಖೆ ಮುಂದಾಗಿದೆ. ಇದರಿಂದ ಸಮಯದ ಜೊತೆಗೆ ಪೇಪರ್‌ಲೇಸ್‌ಕಾರ್ಯ ಆಗಲಿದೆ. ಸಾರ್ವಜನಿಕರು ಸುಲಭವಾಗಿ ತಮ್ಮ ದಾಖಲಾತಿಗಳನ್ನು ಗ್ರಾಮ ಆಡಳಿತಾಧಿಕಾರಿಗಳಿಂದ ಪಡೆಯಲು ಅನುಕೂಲವಾಗಲಿದೆ. ಸಾರ್ವಜನಿಕರಿಗೂ ಸಹ ಇದರಿಂದ ಹೆಚ್ಚು ಸಂತಸ ಉಂಟಾಗುತ್ತದೆ ಎಂಬ ಭಾವನೆ ನನ್ನದು. ಕಾರ್ಯಕ್ರಮದಲ್ಲಿ ಇಒ ಶಶಿಧರ, ಕಂದಾಯಾಧಿಕಾರಿ ತಿಪ್ಪೇಸ್ವಾಮಿ, ಲಿಂಗೇಗೌಡ, ಗ್ರಾಮ ಆಡಳಿತಾಧಿಕಾರಿಸಂಘದ ಅಧ್ಯಕ್ಷ ಪ್ರಕಾಶ್, ನಗರಸಭೆ ಪ್ರಭಾರ ಅಧ್ಯಕ್ಷೆ ಕವಿತಾಬೋರಯ್ಯ, ಸದಸ್ಯರಾದ ಆರ್.ಮಂಜುಳಾ, ಕೆ.ವೀರಭದ್ರಪ್ಪ, ಎಂ.ಜೆ.ರಾಘವೇಂದ್ರ, ಬಿ.ಟಿ.ರಮೇಶ್‌ಗೌಡ ಮುಂತಾದವರು ಉಪಸ್ಥಿತರಿದ್ದರು.

### ವ್ಯಕ್ತಿ ಕಾಣೆಗಳು: ಪತ್ತೆ ನೆರವಿಗೆ ಮನವಿ

» ಚಿತ್ರದುರ್ಗ

ವಿವಿಧ ವ್ಯಕ್ತಿಗಳು ಕಾಣೆಯಾದ ಕುರಿತು ಚಿತ್ರದುರ್ಗ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ 3 ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಜನವರಿ 8 ರಂದು ಚಿತ್ರದುರ್ಗ ತಾಲ್ಲೂಕಿನ ಮೇದೆಹಳ್ಳಿ ಗ್ರಾಮದ ಅಂಜಿನಪ್ಪ ತಂದೆ ಜಿ.ಕೆ.ಈರಪ್ಪ (50) ಕಾಣೆಯಾದ ಕುರಿತು ಪ್ರಕರಣ ದಾಖಲಾಗಿದೆ. ಮುಂಜಾನೆ 9 ಗಂಟೆಗೆ ಕೆಲಸಕ್ಕೆ ಹೋಗಿ ಬರುವುದಾಗಿ ಮನೆಯಿಂದ ತೆರಳಿದ್ದ ಅಂಜಿನಪ್ಪ ವಾಪಾಸ್ಸು ಬಂದಿರುವುದಿಲ್ಲ. ಕಾಣೆಯಾದ ಅಂಜಿನಪ್ಪ 6 ಅಡಿ ಎತ್ತರವಿದ್ದು, ದುಂಡು ಮುಖ, ಕಪ್ಪು ಮೈಬಣ್ಣ, ತಲೆಯಲ್ಲಿ ಸುಮಾರು 3 ಇಂಚು ಉದ್ದದ ಕೂದಲು, 2 ಇಂಚು ಉದ್ದದ ಗಡ್ಡ ಇರುತ್ತದೆ. ಮೇಲ್ದವಡೆಯಲ್ಲಿ 2 ಹಲ್ಲುಗಳು ಇರುವುದಿಲ್ಲ. ಮನೆಯಿಂದ ತೆರಳುವಾಗ ನೀಲಿ ಬಣ್ಣದ ಪಂಚೆ, ಪಿಂಕ್ ಬಣ್ಣದ ಶರ್ಟ್ ಧರಿಸಿರುತ್ತಾರೆ. ಕನ್ನಡ ಹಾಗೂ ತೆಲುಗು ಭಾಷೆ ಮಾತನಾಡುತ್ತಾರೆ. ಮಾರ್ಚ್ 1 ರಂದು ಚಿತ್ರದುರ್ಗ ತಾಲ್ಲೂಕು ಮಾಳಪ್ಪನಹಟ್ಟಿ ಗ್ರಾಮದ ಹನುಮಂತಪ್ಪ ತಂದೆ ಲೇಟ್ ಸಿದ್ದಪ್ಪ(55) ಕಾಣೆಯಾದ ಕುರಿತು ಪ್ರಕರಣ ದಾಖಲಾಗಿದೆ. ರಾತ್ರಿ 7 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದ ಹನುಮಂತಪ್ಪ ನಂತರ ಯಾರ ಸಂಪರ್ಕಕ್ಕೂ ಬಂದಿರುವುದಿಲ್ಲ. ಕಾಣೆಯಾದ ಹನುಮಂತಪ್ಪ ಸುಮಾರು 5.5 ಅಡಿ ಎತ್ತರವಿದ್ದು, ದುಂಡು ಮುಖ, ಕಪ್ಪು ಮೈಬಣ್ಣ, ತೆಳ್ಳನೆಯ ಮೈಕಟ್ಟು, ತಲೆಯಲ್ಲಿ 2 ಇಂಚು ಕಪ್ಪು ಹಾಗೂ ಬಿಳಿ ಬಣ್ಣದ ಕೂದಲು ಹೊಂದಿರುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಶರ್ಟ್ , ನೀಲಿ ಬಣ್ಣದ ಚೌಕಳಿ ಪಂಜೆ ಧರಿಸಿರುತ್ತಾರೆ. ಕನ್ನಡ ಭಾಷೆ ಮಾತನಾಡುತ್ತಾರೆ. ಏಪ್ರಿಲ್ 11 ರಂದು ಚಿತ್ರದುರ್ಗ ತಾಲ್ಲೂಕು ದೊಡ್ಡಾಪುರ ಗ್ರಾಮದ ಪುಟ್ಟಭೋವಿ ತಂದೆ ತಿಮ್ಮ ಬೋವಿ (70) ಕಾಣಿಯಾದ ಕುರಿತು ಪ್ರಕರಣ ದಾಖಲಾಗಿದೆ. ದೊಡ್ಡಾಪುರ ಗ್ರಾಮದ ತಮ್ಮನ ಮನೆಯಲ್ಲಿ ವಾಸವಿದ್ದ ಪುಟ್ಟಭೋವಿ ಸಂಜೆ 4 ಗಂಟೆಗೆ ಮನೆಯಿಂದ ಹೊರ ಹೋದವರು ನಂತರ ಮನೆಗೆ ವಾಪಾಸ್ ಬಂದಿರುವುದಿಲ್ಲ. ಕಾಣೆಯಾದ ಪುಟ್ಟಭೋವಿ 5 ಅಡಿ ಎತ್ತರ, ಕೊಲು ಮುಖ, ಸಾಧರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ತಲೆಯಲ್ಲಿ 2 ಇಂಚು ಕಪ್ಪು ಹಾಗೂ ಬಿಳಿ ಬಣ್ಣದ ಕೂದಲು ಹೊಂದಿರುತ್ತಾರೆ. ಮೊಣಕಾಲಿನ ಮೇಲೆ ಹಳೆಯ ಗಾಯದ ಗುರುತು ಇರುತ್ತದೆ. ಮನೆಯಿಂದ ಹೋಗುವಾಗ ಕಾಫಿ ಕಲರ್ ಚೆಕ್ಸ್ ಅಂಗಿ, ನೀಲಿ ಬಣ್ಣದ ಲುಂಗಿ ಧರಿಸಿರುತ್ತಾರೆ. ಜೊತೆಯಲ್ಲಿ ವೈಟ್ ಬಣ್ಣದ ಟವಲ್, ಕೆಂಪು ಬಣ್ಣದ ಬೆಡ್ ಶೀಟ್ ತೆಗೆದುಕೊಂಡು ಹೋಗಿರುತ್ತಾರೆ. ಕನ್ನಡ ಹಾಗೂ ತೆಲುಗು ಭಾಷೆ ಮಾತನಾಡುತ್ತಾರೆ. ಕಾಣೆಯಾದವರ ಗುರುತು ಪತ್ತೆಯಾದಲ್ಲಿ ಗ್ರಾಮಾಂತರ ಪೋಲೀಸ್ ಠಾಣೆ ಮಾಹಿತಿ ನೀಡುವಂತೆ, ಚಿತ್ರದುರ್ಗ ಕಂಟ್ರೋಲ್ ರೂಂ ಸಂಖ್ಯೆ 080194–222782, 08194–10 ಗೆ ಕರೆ ಮಾಡುವಂತೆ ಪೋಲೀಸ್ ನೀರಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದೆ.

### ಬಹುಮಾನಕ್ಕಾಗಿ ಅರ್ಜಿ

» ದಾವಣಗೆರೆ

ಕರ್ನಾಟಕ ಯಕ್ಷಗಾನ ಅಕಾಡೆಮಿಯು ಯಕ್ಷಗಾನ ಕಲಾಪ್ರಕಾರಗಳಿಗೆ 2024ನೇ ಸಾಲಿನಲ್ಲಿ ಪ್ರಕಟಿಸಿರುವ ಪುಸ್ತಕಳಿಗೆ ಬಹುಮಾನಕ್ಕೆ ಆಯ್ಕೆ ಮಾಡಲು ಲೇಖಕರು,ಪ್ರಕಾಶಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಅಕಾಡೆಮಿಯಿಂದ ಪಡೆದು ಜುಲೈ 10 ರೊಳಗಾಗಿ ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಎರಡನೇ ಮಹಡಿ, ಚಾಲುಕ್ಯ ವಿಭಾಗ, ಜೆ.ಸಿ ರಸ್ತೆ ಬೆಂಗಳೂರು–560002 ಇವರಿಗೆ ಅರ್ಜಿಯೊಂದಿಗೆ ಪುಸ್ತಕದ 4 ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಮಾಹಿತಿಗಾಗಿ ದೂ.ಸಂ:080–22113146.

### ನಗರಸಭೆ 23ರಂದು ಕೌನ್ಸಿಲ್ ಸಭೆ

» ಚಿತ್ರದುರ್ಗ

ಚಿತ್ರದುರ್ಗ ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆಯನ್ನು ಇದೇ ಜೂನ್ 23ರಂದು ಬೆಳಿಗ್ಗೆ 11ಕ್ಕೆ ನಗರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಚಿತ್ರದುರ್ಗ ನಗರಸಭೆ ಅಧ್ಯಕ್ಷೆ ಬಿ.ಎನ್.ಸುಮಿತ ಸಭೆಯ ಅಧ್ಯಕ್ಷತೆ ವಹಿಸುವರು ಎಂದು ನಗರಸಭೆ ಪೌರಾಯುಕ್ತೆ ಎಂ.ರೇಣುಕಾ ತಿಳಿಸಿದ್ದಾರೆ.

# ಅವಧಿ ಮೀರಿದ ಗೊಬ್ಬರ ಸರಬರಾಜು: ಜೆಡಿ ಅವನತ್ತುಗೊಳಿಸಬೇಕೆಂದು ರೈತ ಸಂಘ ಆಗ್ರಹ

» ಚಿತ್ರದುರ್ಗ

ರೈತರಿಗೆ ವಿತರಿಸಿರುವ ಕಳಪೆ ಅವಧಿ ಮೀರಿದ ಗೊಬ್ಬರ ಸರಬರಾಜಿನಲ್ಲಿ ಭ್ರಷ್ಟಾಧಿಕಾರಿಗಳು ಶಾಮೀಲಾಗಿದ್ದು ಸಂಪೂರ್ಣ ತನಿಖೆ ಮೂಲಕ ಜೆ.ಡಿ.ಯನ್ನು ಅವನತ್ತುಗೊಳಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಜಿಲ್ಲಾಧಿಕಾರಿಗಳ ಮೂಲಕ ಕೃಷಿ ಸಚಿವರನ್ನು ಒತ್ತಾಯಿಸಿದೆ.

ಚಿತ್ರದುರ್ಗ ನಗರದ ಕೃಷಿ ಇಲಾಖೆಯ ಮುಂಭಾಗದಲ್ಲಿ ಪ್ರತಿಭಟನೆಯನ್ನು ನಡೆಸಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹೆಸರು ಸೇನೆ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಿದ್ದಾರೆ. ಚಿತ್ರದುರ್ಗ ತಾಲ್ಲೂಕಿನಲ್ಲಿ 6 ವರ್ಷದ ಹಳೇ ಕಳಪೆ ರಸ ಗೊಬ್ಬರವನ್ನು ಸಹಕಾರ ಸಂಘಗಳ ಸೊಸೈಟಿ ಮೂಲಕ ರೈತರಿಗೆ ವಿತರಿಸಿ ರೈತರ ಸಂಕಷ್ಟಕ್ಕೆ ಸಿಲುಕಿಸಿದ್ದಾರೆ ಎಂದು ರೈತರು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಚಿತ್ರದುರ್ಗ ತಾಲ್ಲೂಕು, ಸೇರಿದಂತೆ 6 ವರ್ಷದ ಹಳೇ ಕಳಪೆ 20.20.013 ರಸ ಗೊಬ್ಬರವನ್ನು ಸಹಕಾರ ಸಂಘಗಳ ಸೊಸೈಟಿ ಮೂಲಕ ರೈತರಿಗೆ ವಿತರಿಸಿದ್ದು ರೈತರು ಬೆಳೆಗೆ ಗೊಬ್ಬರ ಹಾಕಿದ ಮೇಲೆ ಚೀಲದ ಮೇಲೆ ಇರುವ ದಿನಾಂಕವನ್ನು ರೈತರು ನೋಡಿ ಚಿತ್ರದುರ್ಗ ಜಂಟಿ ಕೃಷಿ ನಿರ್ದೇಶಕರನ್ನು ರೈತರು ವಿಚಾರಸಲು ಹೋದಾಗ ರೈತರಿಗೆ ಅವಾಚ್ಯ ಶಬ್ದಗಳಿಂದ ಅವಮಾನ ಮಾಡಿದ್ದು ಈ ಬಗ್ಗೆ ಜಿಲ್ಲಾಧಿಕಾರಿಯನ್ನು ಗಮನಕ್ಕೂ ತಂದಿದ್ದರು ಯಾವುದೇ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ತೆಗೆದು ಕೊಂಡಿಲ್ಲ ಹಾಗೂ ಅವಧಿ ಮೀರಿದ ಗೊಬ್ಬರ ಹಾಕಿ ರೈತರಿಗೆ ಬೆಳೆನಷ್ಟವಾಗುತ್ತಿದ್ದರು ಸ್ಥಳ ಪರೀಶೀಲನೆ ಮಾಡಿ ಅಧಿಕಾರಿಗಳು ಬೇಟಿ ನೀಡಿಲ್ಲ. ಸೊಸೈಟಿಯಲ್ಲಿ ದಾಸ್ತಾನು ಇರುವ ಗೊಬ್ಬರ ಮಾತ್ರ ವಾಪಾಸ್ಸು ಪಡೆದಿದ್ದಾರೆ ಎಂದು ದೂರಿದ್ದಾರೆ.



ಭರಮಸಾಗರ ಹೋಬಳಿ, ಚಿಕ್ಕಬೆನ್ನೂರು, ಕೋಗುಂಡೆ, ಕೊಡಿಹಳ್ಳಿ, ಬಹದ್ದೂರುಘಟ್ಟ, ಬಿತ್ತನೆ ಮಾಡಿದ ಮೇಕ್ಕೆಜೋಳ ಪೈನ್ ಇಯರು 34–07 ಹಾಗೂ ಅಡ್‌ವಂಟ ಕಂಪನಿಯ ಬೀಜ ಹುಟ್ಟಿರುವುದಿಲ್ಲ. ಆದರಿಂದ ತಕ್ಷಣ ಬೀಜ, ಗೊಬ್ಬರ ಮತ್ತು ಪರಿಹಾರ ನೀಡಬೇಕು. ಮತ್ತು ಕಳಪೆ ಬೀಜ ಮಾರಾಟ ಮಾಡಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳಬೇಕು. ಡಿ..ಎ.ಪಿ.ಗೊಬ್ಬರ ಕೇಳಿದರೆ ರೈತನಿಗೆ ಬೇಕಿಲ್ಲದ ಬೀಜ ತೆಗೆದುಕೊಂಡರೆ ಮಾತ್ರ ಅಂಗಡಿಯವರು ಡಿ.ಎ.ಪಿ ಗೊಬ್ಬರ ಕೊಡುತ್ತೇವೆ ಎಂದು ಹೇಳುತ್ತಾರೆ. ಇದರ ವಿರುದ್ಧ ಇಲಾಖೆಯವರು ಕ್ರಮವಹಿಸಿರುವುದಿಲ್ಲ ಅಂಗಡಿ ಮುಂದೆ ದಾಸ್ತಾನು ದರ ಸೌಲಭ್ಯವಿರುವ ಗೊಬ್ಬರದ ಹೆಸರನ್ನು ನಫಫಲಕದಲ್ಲಿ ನಮೂದಿಸಿ. ಅಂಗಡಿ ಮುಂದೆ ಸಾರ್ವನಿಕವಾಗಿ ಫಲಕ ಅಳವಡಿಸಬೇಕೆಂದು ಕೆಳಿದ್ದರೂ ಕಾರ್ಯ ರೂಪಕ್ಕೆ ಬಂದಿಲ್ಲ ಎಂದು ಆರೋಪಿಸಿದರು.

ಕೃಷಿಇಲಾಖೆಅಧಿಕಾರಿಗಳನಿರ್ಲಕ್ಷದಿಂದ ಬೇಳೆ ನಷ್ಟ ಪರಿಹಾರ, ಬೆಳೆ ವಿಮೆ ರೈತರಿಗೆ ಬಂದಿಲ್ಲ ಅವೈಜ್ಞಾನಿಕ ಸಮೀಕ್ಷೆಯಿಂದ ರೈತರಿಗೆ ಬೆಳೆ ನಷ್ಟಕ್ಕೆ ವಿಮಾ ಹಣ ದೊರೆತಿಲ್ಲ. ಕಾನೂನುಗಳೆಲ್ಲಾ ಬೆಳೆ ವಿಮೆ ಕಂಪನಿಗಳ ಪರವಾಗಿದ್ದು ಸರ್ಕಾರಗಳು ಮತ್ತು ಅಧಿಕಾರಿಗಳು ಕಂಪನಿಯೊಂದಿಗೆ ಶಾಮೀಲಾಗಿ ಕಂಪನಿಗೆ ಸಾವಿರಾರು ಕೋಟಿ ಲಾಭ ಮಾಡಿಕೊಡುತ್ತಿದ್ದಾರೆ. ರೈತರು ವಿಮೆ ಹಣ ಪ್ರತಿ ವರ್ಷ ಕಟ್ಟಿ ಮೋಸ ಹೋಗುತ್ತಿದ್ದಾರೆ. ಕೃಷಿ ಇಲಾಖೆ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು 5–6 ಬಾರಿ ಸಭೆ ಕರೆದು ಸಭೆಗೆ ಅಧಿಕಾರಿಗಳು ಗೈರಾಗಿ ಸಭೆ ನಡೆಸದೇ ರೈತರನ್ನು ಕರೆಸಿ ಅವಮಾನ ಮಾಡಿದ್ದಾರೆ. ಕೃಷಿ ಇಲಾಖೆ ಅಧಿಕಾರಿಗಳಿಗೆ ರೈತರ ಬಗ್ಗೆ ಕಾಳಜಿಯಿಲ್ಲ ಬರೀ ಪತ್ರಿಕಾ ಹೇಳಿಕೆ, ಅಧಿಕಾರಿಗಳ ಸಭೆ ಮಾಡಿ ಸರ್ಕಾರಕ್ಕೆ ವರದಿ ನೀಡುತ್ತಾ ಸುಳ್ಳು ಹೇಳಿ ರೈತರ ಹೆಸರಿನಲ್ಲಿ ನೂರಾರು ಕೋಟಿ ಅನುದಾನ ನುಂಗುತ್ತಿದ್ದಾರೆ ಎಂದಿದ್ದಾರೆ.

ಕೃಷಿ ಇಲಾಖೆ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರದೇ ಕಛೇರಿಗಳಿಗೆ 100–200 ಕಿ.ಮೀ. ದೂರದಿಂದ ಬರುತ್ತಾರೆ. ಕಛೇರಿಯಲ್ಲಿ ಅಧಿಕಾರಿಗಳನ್ನು ಕೇಳಿದರೆ ಮಿಟಿಂಗ್ ಹೋಗಿದ್ದಾರೆಂದು ಸಿದ್ಧ ಉತ್ತರ ಕಛೇರಿಯಲ್ಲಿ ನೀಡುತ್ತಾರೆ. ಶೇಂಗಾ ಬೀಜದಲ್ಲಿಯೂ ಕಳಪೆ ಬೀಜ ಕಂಡುಬಂದಿದ್ದು ತಕ್ಷಣ ವಾಪಾಸ್ಸು ಪಡೆದು ಉತ್ತಮ ಗುಣಪಟ್ಟದ ಶೇಂಗಾ ಬೀಜವನ್ನು ರೈತರಿಗೆ ವಿತರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾಧ್ಯಕ್ಷ ಡಿ.ಎಸ್.ಹಳ್ಳಿ ಮಲ್ಲಿಕಾರ್ಜುನ್ ವಹಿಸಿದ್ದರು. ಈ ಪ್ರತಿಭಟನೆಯಲ್ಲಿ ಚಿಕ್ಕಹಳ್ಳಿ ತಿಪ್ಪೇಸ್ವಾಮಿ, ರವಿಕೊಗುಂಡೆ, ಸೂರಪ್ಪ ನಾಯಕ, ಮಾಲಮ್ಮ, ಉಮ್ಮಕ್ಕ, ಸರೋಜಮ್ಮ, ಜಯ್ಯಮ್ಮ, ಪೆದ್ದಮ್ಮ, ಅಂಜಿನಮ್ಮ, ಕುಶಲಮ್ಮ, ಬೇಡರೆಡ್ಡಿಹಳ್ಳಿ ಬಸವರೆಡ್ಡಿ, ಚಂದ್ರೇಶೇಖರ್ ನಾಯ್ಕ್, ಮಲಸಮುದ್ರ ಗಂಗಾಧರ, ಪ್ರಶಾಂತ ರೆಡ್ಡಿ, ತಿಮ್ಮಯ್ಯ, ಚಂದ್ರಣ್ಣ, ಕೋಡಿಹಳ್ಳಿ ಹನುಮಂತಪ್ಪ, ಕೆಂಚವೀರಮ್ಮ ಈಶ್ವರಮ್ಮ, ರವಿಕುಮಾರ್, ಹನುಮಂತಪ್ಪ,ಮಂಜುನಾಥ್,ಗಂಗಾಧರ್ ಆಡನೂರು ಶಿವಕುಮಾರ್ ವಿನಾಯಕ ಸೇರಿದಂತೆ ಇತರರು ಭಾಗವಹಿಸಿದ್ದರು.

## ಮಾರುತಿ ಶಾಲೆಗೆ ಶುದ್ಧ ನೀರಿನ ಘಟಕ ಕೊಡುಗೆ

» ಚಳ್ಳಕೆರೆ

ಗ್ರಾಮೀಣ ಭಾಗದ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಕಲಿಕಾ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಬಾರದು. ಸರ್ಕಾರ ಕೆಲವು ಸೌಲಭ್ಯ ನೀಡಿದರೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಾಗ ಇನ್ನೂ ಹೆಚ್ಚಿನ ಸೌಲಭ್ಯ ಅಗತ್ಯವಿದೆ. ದಾನಿಗಳು ಇಂತಹ ಸೌಲಭ್ಯವನ್ನು ನೀಡಲು ಮುಂದೆಬಂದು ವಿದ್ಯಾರ್ಥಿಗಳಿಗೆ ಸಹಾಯವಾಡಬೇಕೆಂದು ಬೇಡರೆಡ್ಡಿಹಳ್ಳಿಯ ಟಾಟಾಸೋಲಾರ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ತಿಳಿಸಿದರು.




ಅವರು, ಗುರುವಾರ ತಾಲ್ಲೂಕಿನ ತಳಕು ಗ್ರಾಮದ ವೆಂಕಣ್ಣಯ್ಯ ವಿದ್ಯಾಸಂಸ್ಥೆಯ ಮಾರುತಿ ಕಿರಿಯ, ಹಿರಿಯಪ್ರಾಥಮಿಕ ಶಾಲೆಯಲ್ಲಿ ಶುದ್ಧಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡಿ ಉದ್ಘಾಟಿಸಿ ಮಾತನಾಡಿದರು. ಮಕ್ಕಳುಪ್ರತಿನಿತ್ಯ ಶುದ್ಧಕುಡಿಯುವ ನೀರು ಸೇವಿಸಿದರೆ ಅವರ ಆರೋಗ್ಯ ಸುಧಾರಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಕಂಪನಿಯಿಂದ ಈ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿಲ್ಲಾ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ, ಶಾಲೆಯ ಮುಖ್ಯೋಪಾಧ್ಯಾಯ ಬಿ.ಸುರೇಶ್ ಮಾತನಾಡಿ, ನಮ್ಮ ಶಾಲೆಗೆ ಟಾಟಾಸೋಲಾರ್ ಕಂಪನಿಯವರು ಶುದ್ಧಕುಡಿಯುವ ನೀರಿನಘಟಕವನ್ನುಕೊಡುಗೆಯಾಗಿ ನೀಡಿ ಮಕ್ಕಳು ಪ್ರತಿನಿತ್ಯ ಶುದ್ಧ ನೀರುಕುಡಿಯುವ ವ್ಯವಸ್ಥೆ ಮಾಡಿದ್ದಾರೆ. ಶಾಲೆಯಪರವಾಗಿ ಅವರನ್ನು ಅಭಿನಂದಿಸುವುದಾಗಿ ತಿಳಿಸಿದರು. ಗ್ರಾಮಪಂಚಾಯಿತಿ ಸದಸ್ಯಟಿ.ಕೃಷ್ಣಮೂರ್ತಿ,ಬಸವರೆಡ್ಡಿ, ಇಂಜಿನಿಯರ್ ಹನುಮೇಶ್, ಟಿ.ವೀರೇಶ್, ತಿಮ್ಮಾರೆಡ್ಡಿ, ಶಿಕ್ಷಕರಾದ ವೀಣಾಶ್ರೀ, ಅಶೋಕ್, ರವೀಂದ್ರ, ಭೀಮಾನಾಯ್ಕ, ಶಾಲಿನಿ, ನಾಗವೇಣಿ, ಚಂದ್ರಿಕಾ, ಬೋರಮ್ಮ, ರೇಖಾ, ಅಂಜು, ಪಿ.ಎಚ್. ಹೂಗಾರ್ ಉಪಸ್ಥಿತರಿದ್ದರು.

## ಹಿಂದುಳಿದ ವರ್ಗದ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನ

ಚಿತ್ರದುರ್ಗ: ಚಿತ್ರದುರ್ಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗ–1, 2ಎ, 3ಬಿ, ವರ್ಗಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರನ್ನು ನ್ಯಾಯಾಂಗ ತರಬೇತಿ ಯೋಜನೆಯಡಿ 2025–26ನೇ ಸಾಲಿನಲ್ಲಿ ಆಯ್ಕೆ ಮಾಡಲು ಖಾಲಿ ಇರುವ 10 ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜುಲೈ 15 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ಇರುವ ನಿಬಂಧನೆಗಳು: ಅಭ್ಯರ್ಥಿಯು ವರ್ಗ–1, 2ಎ, 3ಬಿ, ವರ್ಗಕ್ಕೆ ಸೇರಿದ ಅಭ್ಯರ್ಥಿಗಳಾಗಿರಬೇಕು. ಆಯ್ಕೆ ಮಾಡಲಾಗುವ ಒಟ್ಟಾರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಲ್ಲಿ ಶೇ.33.33 ರಷ್ಟು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿಡಲಾಗುವುದು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಹಿಂದೆ ಎರಡು ವರ್ಷಗಳಗೊಳಗಾಗಿ ಅಭ್ಯರ್ಥಿಯು ಕಾನೂನು ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಸರ್ಕಾರಿ ಆದೇಶದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ 2ಎ, 3ಎ, 3ಬಿ ವರ್ಗಗಳ (ಅಲ್ಪ ಸಂಖ್ಯಾತರ ಜಾತಿಗಳನ್ನು ಹೊರತುಪಡಿಸಿ) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ವಾರ್ಷಿಕ ಆದಾಯ ರೂ. 2,50,000/– ಹಾಗೂ ಪ್ರವರ್ಗ–1 ಅಭ್ಯರ್ಥಿಗಳು ರೂ.3,50,00 ಗಳ ಆದಾಯ ಮೀರಿಬಾರದು. ಈ ತರಬೇತಿಯು 4 ವರ್ಷಗಳಾಗಿದ್ದು, ತರಬೇತಿ ಅವಧಿಯಲ್ಲಿ ನಿಯಮಾನುಸಾರ ಭತ್ಯೆ ನೀಡಲಾಗುವುದು. ಆಯ್ಕೆಯನ್ನು ಜಿಲ್ಲಾ ಆಯ್ಕೆ ಸಮಿತಿ ಮೂಲಕ ನಡೆಸಲಾಗುವುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ನಿಗದಿಪಡಿಸಿದ ದಿನಾಂಕಕ್ಕೆ ಕನಿಷ್ಠ 38 ವರ್ಷ ಹಾಗೂ ಪ್ರವರ್ಗ–1ರ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷ ಮೀರಿರಬಾರದು. ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೊಂದಾಯಿಸಿರಬೇಕು. ನೊಂದಾಯಿಸಿಲ್ಲದ ಪಕ್ಷದಲ್ಲಿ ಆಯ್ಕೆಯಾದ ತಕ್ಷಣ ನೊಂದಾಯಿಸದ ಹೊರತು ಶಿಷ್ಯವೇತನ ಪಾವತಿಯಾಗುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಜಾತಿ, ಆದಾಯ ಪ್ರಮಾಣ ಪತ್ರ ಅಥವಾ ಇತರೆ ಯಾವುದೇ ತಪ್ಪು ಮಾಹಿತಿಯನ್ನು ನೀಡಿ ಆಯ್ಕೆಯಾದ ಪಕ್ಷದಲ್ಲಿ ಅಂತವರನ್ನು ಶಿಕ್ಷೆಗೆ ಗುರಿಪಡಿಸುವುದಲ್ಲದೇ, ಶಿಷ್ಯ ವೇತನದ ಜೊತೆಗೆ ಶೇ.10ರ ಬಡ್ಡಿಯನ್ನು ಭೂ ಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲಾಗುವುದು. ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ವಕೀಲರ ಬಳಿ ತರಬೇತಿಗೆ ನಿಯೋಜಿಸಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಹಾಗೂ ನಿಗದಿತ ಅರ್ಜಿ ನಮೂನೆಗಳನ್ನು ಪಡೆಯಲು ಚಿತ್ರದುರ್ಗ ನಗರದ ಸ್ಟೇಡಿಯಂ ರಸ್ತೆಯ ಡಿ.ದೇವರಾಜ ಅರಸು ಭವನದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಜಾನ್ ಮೈನ್ಸ್ ವತಿಯಿಂದ ಸಿರಿಗೆರೆಯಲ್ಲಿ ಯೋಗ ದಿನ

» ಚಿತ್ರದುರ್ಗ

ಜಾನ್ ಮೈನ್ಸ್ ಸಹಯೋಗದಲ್ಲಿ ಸರ್ಕಾರಿಮಾದರಿಹಿರಿಯಪ್ರಾಥಮಿಕ ಬಾಲಕರ ಶಾಲೆ, ಸಿರಿಗೆರೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಾನ್ ಮೈನ್ಸ್ ನ ವತಿಯಿಂದ ವಿನಾಯಕ ಸರ್ ಅಜಿತ್ ಸರ್ ಹಾಗೂ ಅಮರೇಶ್ ಸರ್ ಭಾಗವಹಿಸಿದ್ದರು. ಬಾಲಕಿಯರ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕರಾದ ಸೌಭಾಗ್ಯ ಮತ್ತು ವಿಜಯ ಕಲಾ, ಪುಷ್ಪಲತಾ,




ಬಾಲಕರ ಶಾಲೆಯ ಕಲ್ಪನಾ ಕೆ.ಜಿ ಮಧು ಮತ್ತು ಪ್ರಭಾರಿ ಮುಖ್ಯ ಶಿಕ್ಷಕಿ ಜ್ಯೋತಿ ಲಕ್ಷ್ಮಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಯೋಗ ಶಿಕ್ಷಕರಾದ ರೂಪ ಅಳಗವಾಡಿ ಇವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಕ್ಕಳಿಗೆ ಯೋಗದ ಮಹತ್ವ ಯೋಗದಿಂದ ನಮಗೆ ಆಗುವ ಉಪಯೋಗ ಯೋಗದಮಂತ್ರಗಳನ್ನುತಿಳಿಸಿದರು. ನಂತರ ಮಕ್ಕಳಿಗೆ ಒಂದು ಗಂಟೆಗೂ ಹೆಚ್ಚು ಕಾಲ ಯೋಗಾಸನಗಳನ್ನು ಮಾಡಿ ತೋರಿಸಿ ಮಕ್ಕಳಿಂದಲೂ ಯೋಗಾಸನವನ್ನು ಮಾಡಿಸಿದರು.

ಯೋಗ ಶಿಕ್ಷಕರಲ್ಲಿ ನಮ್ಮ ಶಾಲೆಯ ಶಿಕ್ಷಕರಾಗಿರತಕ್ಕಂತ ಮಧು ಅವರು ನಮಗೆ ತಿಂಗಳಿಗೆ ಒಮ್ಮೆಯಾದರೂ ನಮ್ಮ ಮಕ್ಕಳಿಗೆ ಯೋಗ ಶಿಕ್ಷಣವನ್ನ ನೀಡಿ ಎಂದು ಅವರಲ್ಲಿ ಮನವಿಯನ್ನು ಸಲ್ಲಿಸಿದರು. ಮಕ್ಕಳು ತುಂಬಾ ಉತ್ಸಾಹದಿಂದ ಭಾಗವಹಿಸಿದ್ದರು ಮಕ್ಕಳಿಗೆ ಕೊನೆಯಲ್ಲಿ ಸಿಹಿಯನ್ನ ಹಂಚಲಾಯಿತು.

## ಪ್ರಮುಖ ಸುದ್ದಿ

### ರಾಹುಲ್‌ಗಾಂಧಿಯವರ 55ನೇ ಹುಟ್ಟುಹಬ್ಬ

# ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಏಕೈಕ ಪಕ್ಷ ಕಾಂಗ್ರೆಸ್

» ಚಳ್ಳಕೆರೆ

ಕಾಂಗ್ರೆಸ್ ಪಕ್ಷದ ಯುವನಾಯಕ, ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿಯವರ 55ನೇ ಜನ್ಮದಿನಾಚರಣೆಯನ್ನು ನಗರದ ಶಾಸಕ ಭವನದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಕೇಕ್ ಕತ್ತರಿಸುವ ಮೂಲಕ ಸರಳವಾಗಿ ಆಚರಿಸಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಟಿ.ಪ್ರಭುದೇವ್, ದೇಶದ ಇತಿಹಾಸದಲ್ಲಿಸ್ವಾತಂತ್ರ್ಯಕ್ಕಾಗಿ ಹೋರಾಡಿದ ಏಕೈಕ ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಮಾತ್ರ. ಕಾಂಗ್ರೆಸ್ ಪಕ್ಷದ ಹಿರಿಯ ನೇತಾರರಾದ ಮಾಜಿ ಪ್ರಧಾನಮಂತ್ರಿ ಇಂದಿರಾಗಾಂಧಿ, ರಾಜೀವಗಾಂಧಿ ಮುಂತಾದವರು ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗಮಾಡಿದ್ದಾರೆ. ರಾಜೀವಗಾಂಧಿಯವರ ಪುತ್ರ





ರಾಹುಲ್‌ಗಾಂಧಿ ಸಹ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇಯಾದ ವಿಶೇಷಛಾಪು ಹೊಂದಿದ್ದಾರೆ. ರಾಷ್ಟ್ರವನ್ನು ಮುನ್ನಡೆಸಲು ಶಕ್ತಿಶಾಲಿ, ಯುವರಾಜಕರಣೀಯಾಗಿ ಹೊರಹೊಮ್ಮಿದ್ಧಾರೆ. ಅವರ ಮಾರ್ಗದರ್ಶನದಲ್ಲಿ ಮುಂದಿನದಿನಗಳಲ್ಲಿ ದೇಶದಲ್ಲಿ ಆಡಳಿತವನ್ನು ನಡೆಸುವುದರಲ್ಲಿ ಯಾವುದೇ ಸಂದೇಹವಿಲ್ಲವೆಂದರು. ಬೆಳಕು ಕಿವುಡ, ಮೂಗರ ಶಾಲೆ, ಮತ್ತು ಜೀವಸ್ವಾಸ ಬಾಲಕಿಯರ ವಸತಿ ಕೇಂದ್ರದಲ್ಲಿ ರಾಹುಲ್‌ಗಾಂಧಿಯವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಿ ಪೆನ್ನು, ಪುಸ್ತುಕ, ಸಿಹಿ ನೀಡಿ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಪಿ.ಮಂಜುನಾಥ, ಹರ್ಷವರ್ಧನ್, ಭಾನುವೀರೇಶ್, ಪ್ರದೀಪ್, ಬಾಬು, ಹನುಮಂತಪ್ಪ, ಸೇವಾದಳ ಮಹಮ್ಮದ್‌ಸೈಫುಲ್ಲಾ, ದೊಡ್ಡ ಉಳ್ಳಾರ್ತಿಪತ್ತಿನ ಸಹಕಾರ ಸಂಘದ ನಿರ್ದೇಶಕ ರುದ್ರಮುನಿ ಭಾಗವಹಿಸಿದ್ದರು.

## ಫಾಸ್ಟ್ ನ್ಯೂಸ್

### ತೋಟಗಾರಿಕೆ ಬೆಳೆಗಳಿಗೆ ಫಸಲ್ ಬಿಮಾ ಯೋಜನೆ ನೋಂದಣಿ ಆರಂಭ

» **ಚಿತ್ರದುರ್ಗ**

2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೋಟಗಾರಿಕಾ ಬೆಳೆಗಳಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಬೆಳೆ ವಿಮೆ ನೊಂದಣಿ ಪ್ರಾರಂಭವಾಗಿದೆ. ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಾದ ಈರುಳ್ಳಿ, ಟೊಮ್ಯಾಟೋ ಹಾಗೂ ಕೆಂಪು ಮೆಣಸಿನಕಾಯಿ ಬೆಳೆಗಳಿಗೆ ವಿಮೆ ನೊಂದಣಿ ಮಾಡಬಹುದು. ತೋಟಗಾರಿಕೆ ಬೆಳೆಗಳ ವಿವರ: 2025ರ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಗೆ ಅಧಿಸೂಚಿತ ತೋಟಗಾರಿಕೆ ಬೆಳೆಗಳ ವಿವರ ಇಂತಿದೆ. ಚಿತ್ರದುರ್ಗ ತಾಲ್ಲೂಕು ಕಸಬಾ, ತುರುವನೂರು ಹಾಗೂ ಹಿರೇಗುಂಟನೂರು ಹೋಬಳಿ (ಈರುಳ್ಳಿ ನೀರಾವರಿ, ಈರುಳ್ಳಿ ಮಳೆಯಾಶ್ರಿತ), ಭರಮಸಾಗರ ಹೋಬಳಿ (ಈರುಳ್ಳಿ ನೀರಾವರಿ, ಟೊಮೋಟೊ). ಚಳ್ಳಕೆರೆ ತಾಲ್ಲೂಕಿನ ಕಸಬಾ, ನಾಯಕನಹಟ್ಟಿ, ಪರುಶುರಾಂಪುರ ಹಾಗೂ ತಳಕು ಹೋಬಳಿಗೆ (ಈರುಳ್ಳಿ ನೀರಾವರಿ, ಟೊಮೋಟೊ) ಹಿರಿಯೂರು ತಾಲ್ಲೂಕು ಕಸಬಾ ಹೋಬಳಿ (ಈರುಳ್ಳಿ ನೀರಾವರಿ) ಧರ್ಮಪುರ ಹೋಬಳಿ (ಈರುಳ್ಳಿ ನೀರಾವರಿ, ಟೊಮೋಟೋ) ಐಮಂಗಲ, ಜೆ.ಜಿ.ಹಳ್ಳಿ ಹೋಬಳಿಗೆ (ಈರುಳ್ಳಿ ನೀರಾವರಿ, ಈರುಳ್ಳಿ ಮಳೆಯಾಶ್ರಿತ). ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಹಾಗೂ ತಾಳ್ಯ ಹೋಬಳಿ (ಈರುಳ್ಳಿ ನೀರಾವರಿ, ಈರುಳ್ಳಿ ಮಳೆಯಾಶ್ರಿತ, ಟೊಮೋಟೊ), ಹೊಸದುರ್ಗ ತಾಲ್ಲೂಕು ಕಸಬಾ ಹೋಬಳಿ (ಈರುಳ್ಳಿ ಮಳೆಯಾಶ್ರಿತ, ಟೊಮೊಟೊ, ಕೆಂಪು ಮೆಣಸಿನಕಾಯಿ (ಮಳೆಯಾಶ್ರಿತ). ಮೊಳಕಾಲ್ಮುರು ತಾಲ್ಲೂಕು ದೇವಸಮುದ್ರ ಹಾಗೂ ಕಸಬಾ ಹೋಬಳಿ (ಈರುಳ್ಳಿ ನೀರಾವರಿ, ಟೊಮೋಟೊ). ವಿಮಾ ಕಂತಿನ ವಿವರ: ಟೊಮ್ಯಾಟೋ ಬೆಳೆಯ ವಿಮೆ ಮೊತ್ತ ಹೆಕ್ಟೇರ್‌ಗೆ ರೂ.141500 ಇದ್ದು, ರೈತರ ವಿಮಾ ಕಂತು ರೂ.7075 ಆಗಿದೆ. ನೀರಾವರಿ ಈರುಳ್ಳಿ ವಿಮೆ ಮೊತ್ತ ಹೆಕ್ಟೇರ್‌ಗೆ ರೂ.80500 ಇದ್ದು, ರೈತರ ವಿಮಾ ಕಂತು ರೂ.4025 ಆಗಿದೆ. ಮಳೆ ಆಶ್ರಿತ ಈರುಳ್ಳಿ ವಿಮಾ ಮೊತ್ತ ಹೆಕ್ಟೇರ್‌ಗೆ ರೂ. 75750 ಆಗಿದ್ದು, ರೈತರ ಮಿಮಾ ಕಂತು ರೂ.3787.50 ಆಗಿದೆ. ಮಳೆ ಆಶ್ರಿತ ಕೆಂಪು ಮೆಣಸಿಕಾಯಿ ವಿಮಾ ಮೊತ್ತ ಹೆಕ್ಟೇರ್‌ಗೆ ರೂ.78750 ಆಗಿದ್ದು, ರೈತರ ವಿಮಾ ಕಂತು 3937.50 ಆಗಿದೆ. ಅಧಿಸೂಚಿತ ಬೆಳೆಗಳ ವಿಮೆಯನ್ನು ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ ಹಾಗೂ ಆರ್ಥಿಕ ಸಂಸ್ಥೆಗಳ ನೊಂದಣಿ ಮಾಡಬಹುದು. 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಮೆ ನೋಂದಣಿಗೆ ಜುಲೈ 31 ಕೊನೆಯ ದಿನವಾಗಿದೆ. ನೀರಾವರಿ ಆಶ್ರಿತ ಈರುಳ್ಳಿ ಬೆಳೆ ವಿಮೆ ನೊಂದಣಿಗೆ ಜುಲೈ 15 ಕಡೆಯ ದಿನ. ದಿ ಓರಿಎಂಟಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಅನ್ನು ವಿಮಾ ಕಂಪನಿಯಾಗಿ ಜಿಲ್ಲೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ತೋಟಗಾರಿಕೆ ಇಲಾಖೆ ಕಚೇರಿ, ರೈತ ಸಂಪರ್ಕ ಕೇಂದ್ರ ಅಥವಾ ಹತ್ತಿರದ ಬ್ಯಾಂಕುಗಳನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

### ವಿದ್ಯುತ್ ವ್ಯತ್ಯಯ

» **ಚಿತ್ರದುರ್ಗ**

ಹಿರಿಯೂರು ಉಪವಿಭಾಗದ ವ್ಯಾಪ್ತಿಯ ಭರಮಗಿರಿ, ಪಿ.ಡಿ.ಕೋಟೆ, ಹರಿಯಬ್ಬೆ, ಹಾಗೂ ಕಲಮರನಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಇದೇ ಜೂನ್ 20ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸದರಿ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ನಿರ್ವಹಿಸುವ ಪ್ರಯುಕ್ತ ಜೂನ್ 20 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಹರಿಯಬ್ಬೆ, ಶ್ರವಣಗೆರೆ, ಬೆನಕನಹಳ್ಳಿ, ಸಕ್ಕರ, ಪಿ.ಡಿ.ಕೋಟೆ, ಹಲಗಲುದ್ದಿ, ಮುದ್ದಿಹಳ್ಳಿ, ಮದ್ದಹಳ್ಳಿ ಗೊಲ್ಲರಹಟ್ಟಿ, ಶಾಂತಿನಗರ, ಖಂಡೇನಹಳ್ಳಿ, ಖಂಡೇನಹಳ್ಳಿ ಪಾಳ್ಯ, ಹೊಸಕೆರೆ, ಹೊಸಕೆರೆಪಾಳ್ಯ, ಬೇತೂರು, ಬೇತೂರು ಪಾಳ್ಯ, ಮಾರಮ್ಮನಹಳ್ಳಿ, ಕಣಜನಹಳ್ಳಿ, ಸೂಗೂರು, ಮುಂಸವವಹಳ್ಳಿ, ಕೃಷ್ಣಗಿರಿ, ವಿ.ಕೆ.ಗುಡ್ಡ, ಚಿಲ್ಲಹಳ್ಳಿ, ಯಳಗೊಂಡನಹಳ್ಳಿ, ಅಬ್ಬಿನಹೊಳೆ, ಈಶ್ವಗೆರೆ, ಈಶ್ವಗೆರೆ ಗೊಲ್ಲರಹಟ್ಟಿ, ಹೂವಿನಹೊಳೆ, ದೇವರಕೊಟ್ಟ, ಬುರುಡುಕುಂಟೆ, ಯಳವಾಹಟ್ಟಿ, ಹೊಸಹಳ್ಳಿ, ಗುಳ್ಯಾ, ಗುಳ್ಯಾ ಗೊಲ್ಲರಹಟ್ಟಿ, ವಿವಿಪುರ, ಗೋಗುದ್ದು, ಗುಡಿಹಟ್ಟಿ, ಭೂತಯ್ಯಹಟ್ಟಿ, ಭರಂಗಿರಿ, ಕುರುಬರಹಟ್ಟಿ, ಗೌನಹಳ್ಳಿ, ತಳವಾರಹಟ್ಟಿ, ಬೆಳಗಟ್ಟ, ಕೂನಿಕೆರೆ, ಎರಕೆನಾಗೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮದ ಗ್ರಾಹಕರು, ರೈತರು, ಸಾರ್ವಜನಿಕರು ಸಹಕರಿಸಬೇಕು ಎಂದು ಹಿರಿಯೂರು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹೆಚ್.ಪೀರ್‌ಸಾಬ್ ಕೋರಿದ್ದಾರೆ.

### ಅರ್ಜಿ ಆಹ್ವಾನ

» **ದಾವಣಗೆರೆ**

ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವತಿಯಿಂದ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಇಲಾಖೆ ವೆಬ್ ಸೈಟ್ :dom.karkataka.gov.in ನಲ್ಲಿ ಪರಿಶೀಲಿಸಬೇಕು. ಹೆಚ್ಚಿನ ಮಾಹಿತಿಯನ್ನು ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in ಮೂಲಕ ಸೆಪ್ಟೆಂಬರ್ 30 ರೊಳಗಾಗಿ ಸಲ್ಲಿಸಿ.

### ಹೈಸ್ಕೂಲ್ ಮೈದಾನದಲ್ಲಿ ಜೂನ್ 21 ರಂದು 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ

# 3000 ಜನರಿಂದ ಯೋಗ ಪ್ರದರ್ಶನ: ಡಿಸಿ

» **ದಾವಣಗೆರೆ**



ನಗರದ ಹೈಸ್ಕೂಲ್ ಮೈದಾನದಲ್ಲಿ ಇದೇ ಜೂನ್ 21ರ ಬೆಳಿಗ್ಗೆ 5.30 ರಿಂದ 7.45 ರವರೆಗೆ "ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ" ಎಂಬ ಘೋಷವಾಕ್ಯದೊಂದಿಗೆ 11 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಬೃಹತ್ ಯೋಗ ಪ್ರದರ್ಶನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.ಜೂ.21 ರಂದು ಬೆಳಗ್ಗೆ 5.30 ರಿಂದ 6ರವರೆಗೆ ಬ್ರಹ್ಮಕುಮಾರಿ ಸಂಸ್ಥೆ ವತಿಯಿಂದ ಧ್ಯಾನ, ಬೆಳಗ್ಗೆ 6 ರಿಂದ 6.20 ರವರೆಗೆ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಅಷ್ಟ ನಮಸ್ಕಾರ ಹಾಗೂ 7 ಗಂಟೆಯವರೆಗೆ ಉದ್ಘಾಟನಾ ವೇದಿಕೆ ಕಾರ್ಯಕ್ರಮ ನಡೆಯಲಿದೆ. ತದನಂತರ ಸಾಮಾನ್ಯ ಯೋಗ ಶಿಷ್ಟಾಚಾರ ಮಾಡಲಾಗುವುದು. ಯೋಗ ದಿನಾಚರಣೆ ನಗರದ ಎಲ್ಲಾ ಯೋಗ ಸಂಸ್ಥೆಗಳು, ಯೋಗಾಸ್ತಕರು, ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಮೂರು ಸಾವಿರಕ್ಕೂ ಅಧಿಕ ಜನತೆ ಭಾಗವಹಿಸುವ ನಿರೀಕ್ಷೆ ಇದೆ. ಜಿಲ್ಲೆಯಾದ್ಯಂತ 36 ಶಾಲಾ ಕಾಲೇಜುಗಳಲ್ಲಿ ಪ್ರತಿದಿನ ಯೋಗಾಭ್ಯಾಸ ನಡೆಸಲಾಗುತ್ತಿದೆ. ಯೋಗದಲ್ಲಿ ಯೋಗಾ ಪಾಥ್, ಯೋಗ ಸಂಗಮದಿಂದ ಯೋಗ ತರಬೇತಿ ನೀಡಲಾಗುವುದು. ಯೋಗ ಮಾಡುವುದರಿಂದ ಮಾನಸಿಕ ಹಾಗೂ ದೈಹಿಕ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ಉತ್ತಮ ಆರೋಗ್ಯ ವೃದ್ಧಿಸುತ್ತದೆ ಎಂದರು.

**ಹಿಟ್ ಅಂಡ್ ರನ್ ಪ್ರಕರಣ ತ್ವರಿತ ಪರಿಹಾರ:** ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತ ಪ್ರಕರಣಗಳು ಹೆಚ್ಚಾಗುತ್ತಿದ್ದು, 2023 ರಲ್ಲಿ ರಸ್ತೆ ಅಪಘಾತ ಪ್ರಕರಣಗಳಲ್ಲಿ 324 ಜನರು ಪ್ರಾಣ ಕಳೆದುಕೊಮಡಿದ್ದಾರೆ. 2024 ರಲ್ಲಿ ಶೇ 30 ರಷ್ಟು ತಗ್ಗಿದ್ದು ಅಪಘಾತದಲ್ಲಿ 260 ಜನರು ಸಾವನಪ್ಪಿದ್ದಾರೆ. ಅಪಘಾತ ಪ್ರಕರಣಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಸಂಚಾರಿ ನಿಯಮಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ. ಏಕಮುಖ ರಸ್ತೆಯನ್ನು ಸಂಚರಿಸುವುದು ಸಾಮಾನ್ಯವಾಗಿದೆ. ದ್ವಿ ಚಕ್ರ ವಾಹನ ಚಾಲಕರು ವಿರುದ್ಧ ದಿಕ್ಕಿನಲ್ಲಿ ವಾಹನ ಚಲಾಯಿಸುವುದು ಮತ್ತು ಪ್ರಶ್ನಿಸಿದಲ್ಲಿ ನೀನು ಯಾರು ಎಂದು ಪ್ರಶ್ನಿಸುವ ಮನೋಭಾವ ಜನರಲ್ಲಿದ್ದು ಇದು ಸ್ವತಃ ನನಗೆ ಅನುಭವವಾಗಿದೆ. ಇಂತಹವರ ಮೇಲೆ ಕಾನೂನು ಕ್ರಮ ಜರುಗಿಸಲು ಪೊಲೀಸ್ ಇಲಾಖೆಗೆ ಸೂಚನೆ ನೀಡಲಾಗಿದೆ ಎಂದರು.

ಹಿಟ್ ಅಂಡ್ ರನ್ ಪ್ರಕರಣ ಘಟಿಸಿದಾಗ ಪರಿಹಾರ ಪಡೆಯಲು ಅವಕಾಶ ಇದೆ. ಮರಣ ಹೊಂದಿದಲ್ಲಿ ಎರಡು ಲಕ್ಷ, ಗಾಯಾಳು ಆದಲ್ಲಿ ರೂ.50 ಸಾವಿರ ಪಡೆಯಬಹುದು. ಪರಿಹಾರ ಪಡೆಯಲು ಸಂಬಂಧಪಟ್ಟ ಠಾಣೆಯಲ್ಲಿ ದಾಖಲಿಸಿದ ಎಫ್‌ಐಆರ್ ನೊಂದಿಗೆ 30 ದಿನಗಳ ಒಳಗಾಗಿ ಇಲಾಖೆಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ನಂತರ ಜಿಲ್ಲಾಡಳಿತ ವತಿಯಿಂದ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಗೆ 2 ಲಕ್ಷ, ಗಾಯಾಳುಗೆ 50 ಸಾವಿರ ಕೇವಲ ಒಂದು ತಿಂಗಳಲ್ಲಿ ಪರಿಹಾರ ಒದಗಿಸಲಾಗುವುದು ಎಂದ ಅವರು.

ನಗರದ ನಾನಾ ಕಡೆ ರಸ್ತೆಗಳು ಹದಗೆಟ್ಟಿರುವುದು ಕಂಡು ಬಂದಿದೆ. ಪಾಲಿಕೆಯಿಂದಅಂತಹಬ್ಲಾಕ್‌ಸ್ಪಾಟ್‌ಗಳನ್ನು ದುರಸ್ಥಿಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಅಲ್ಲದೇ ನಗರದಲ್ಲಿ ಒನ್ ವೇ ರಸ್ತೆಗಳಲ್ಲಿ ತೆರಳುವುದರಿಂದ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ ಆದ್ದರಿಂದ ಏಕಮುಖ ಸಂಚಾರ ನಿರ್ಬಂಧಿಸುವಂತೆ ಎಚ್ಚರಿಕೆ ನೀಡಿದರು. ಅಷ್ಟೇ ಅಲ್ಲದೇ ಸೂಚನೆ, ರಸ್ತೆ ಸಂಚಾರ ನಿಯಮ ಉಲ್ಲಂಘಿಸಿದಲ್ಲಿ ಅಧಿಕ ಮೊತ್ತದ ದಂಡ ವಿಧಿಸುವುದಲ್ಲದೇ ವಾಹನ ಜಪ್ತಿ ಮಾಡಿ ಪರವಾನಗಿ ಸಹ ರದ್ದುಪಡಿಸಲಾಗುದು ಎಂದರು.

**ರೂ. 1.5 ಲಕ್ಷದವರೆಗೂ ನಗದು ರಹಿತ ಉಚಿತ ಅಪಘಾತ ಚಿಕಿತ್ಸೆ:** 2025ರ ಮೇ 25 ರಿಂದ ಅನ್ವಯವಾಗುವಂತೆ ಆಯುಷ್ಮಾನ್ ಭಾರತ್ ಯೋಜನೆಯಡಿ ಪ್ರತಿಯೊಬ್ಬ ನಾಗರೀಕನಿಗೂ 1.5 ಲಕ್ಷದವರೆಗೂ ಅಪಘಾತವಾದ ಪ್ರಕರಣಗಳಲ್ಲಿ ಕ್ಯಾಶ್‌ಲೆಸ್ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಅನೈತಿಕ ಚಟುವಟಿಕೆಗಳಿಗೆ ಕಡಿವಾಣ: ನಗರದ ಪ್ರಮುಖ ಸ್ಥಳಗಳಲ್ಲಿ ಸಂಜೆಯಾದರೆ ಮದ್ಯ, ಮಾದಕ ವ್ಯಸನಿಗಳ ಹಾವಳಿ ಹೆಚ್ಚಾಗಿರುವ ಆರೋಪಗಳು ವ್ಯಾಪಕವಾಗಿ ಕೇಳಿ ಬರತ್ತಿದ್ದು, ಸೂಕ್ತಕ್ರಮ ಕೈಗೊಳ್ಳಲಾಗುವುದು. ನಗರದ ಆಜಾದ್ ನಗರದಲ್ಲಿ ಕೋಟ್ಯಾಂತರ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದೆ ಆದರೆ ಇಲ್ಲಿ ಸಂಜೆಯಾದರೆ ಕುಡುಕರ, ಮಾದಕ ವ್ಯಸನಿಗಳ ಅಡ್ಡೆಯಾಗಿ ಮಾರ್ಪಾಟಾಗಿರುವುದು ಗಮನಕ್ಕೆ ಬಂದಿದೆ. ಹಾಗೆಯೇ ಕೆಲವು ಔಷಧಿ ಅಂಗಡಿಗಳಲ್ಲಿ ಅನಧಿಕೃತ ವಿವಿಧ ರೀತಿಯ ಟ್ಯಾಬ್ಲೆಟ್, ಇನ್ನಿತರೆ ಔಷಧಿಗಳು ದೊರಕುವುದರಿಂದ ಯುವಕರು ಹೆಚ್ಚಾಗಿ ಮದ್ಯ, ಮಾದಕ ವಸ್ತುಗಳ ವ್ಯಸನಗಳಿಗೆ ಬಲಿಯಾಗುತ್ತಿದ್ದಾರೆ ಎಂಬ ಪ್ರಶ್ನೆಗೆ ಸ್ಪಂದಿಸಿ ಇದಕ್ಕೆ ಶೀಘ್ರದಲ್ಲಿಯೇ ಪರಿಶೀಲನೆ ನಡೆಸಿ ಕ್ರಮವಹಿಸುವುದಾಗಿ ಭರವಸೆ ನೀಡಿದರು.

**ಜಲಶ್ರೀ ಯೋಜನೆ 3 ತಿಂಗಳಲ್ಲಿ ಪೂರ್ಣ:** ದಾವಣಗೆರೆ ನಗರದಲ್ಲಿ ಈಗಾಗಲೇ ಜಲಸಿರಿ ಯೋಜನೆ ಶೇ.80% ರಷ್ಟು ಪೂರ್ಣಗೊಂಡಿದೆ. ಇನ್ನೂ ಉಳಿದ ಕಾಮಗಾರಿ 2 ರಿಂದ 3 ತಿಂಗಳ ಒಳಗಾಗಿ ಪೂರ್ಣಗೊಳ್ಳುವುದರಿಂದ ಎಲ್ಲಾ ಬಡಾವಣೆಗಳಲ್ಲಿ ನಿರಂತರ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತದೆ ಎಂದರು.

**ಬಿತ್ತನೆ ಬೀಜ, ಗೊಬ್ಬರ ಕೊರತೆಯಿಲ್ಲ:** ಈ ಭಾರಿ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದೆ, ರೈತರು ಬಿತ್ತನೆ ಕಾರ್ಯ ಚುರುಕುಗೊಳಿಸಿದ್ದಾರೆ. ಆದ್ದರಿಂದ ರೈತರಿಗೆ ಬೇಕಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಸಾಕಷ್ಟು ದಾಸ್ತಾನು ಮಾಡಲಾಗಿದೆ. ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ವಿತರಿಸಬೇಕು. ರೈತರು ಸಹ ಉತ್ತಮ ಗುಣಮಟ್ಟದ ಬೀಜಗಳನ್ನು ರೈತ ಸಂಪರ್ಕ ಕೇಂದ್ರ, ಅಧಿಕೃತ ಮಾರಾಟಗಾರರಿಂದ ಖರೀದಿಸಬೇಕು. ಉತ್ಪನ್ನಗಳನ್ನು ಖರೀದಿಸಿದ ರಶೀದಿಗಳನ್ನು ಬೆಳೆ ಕಟಾವು ಮಾಡುವವರೆಗೂ ಜಾಗೃತವಾಗಿ ಇಟ್ಟುಕೊಂಡಿರಬೇಕು. ಬೀಜ ಗೊಬ್ಬರಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮಕೈಗೊಂಡು ಸೂಕ್ತ ಪರಿಹಾರ ಪಡೆಯಲು ಸಹಾಯಕವಾಗಲಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ನೂತನ ಜಿಲ್ಲಾ ಪಂಚಾಯತ್ ಸಿಇಓ ಮಾದವ ವಿಠಲ ರಾವ್, ಪೌರಾಯುಕ್ತೆ ರೇಣುಕಾ, ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮಹಾಂತೇಶ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಯೋಗೇಂದ್ರ ಕುಮಾರ್ ಮತ್ತಿತರರು ಇದ್ದರು.

## ಡಿಸಿ ಕಚೇರಿ ಆವರಣದಲ್ಲಿ ಯೋಗನಡಿಗೆಗೆ ಚಾಲನೆ

» **ಚಿತ್ರದುರ್ಗ**




11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಚಿತ್ರದುರ್ಗ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಗುರುವಾರ ವಿವಿಧ ಯೋಗ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಯೋಗ ನಡಿಗೆ ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹಾಗೂ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ರಂಗಸ್ವಾಮಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಯೋಗ ಭಾರತ ದೇಶದ ಹೆಮ್ಮೆಯ ಕೊಡುಗೆ. ಇದು ಜಗತ್ತಿನಾದ್ಯಂತ ಪಸರಿಸುತ್ತಿರುವುದು ಹರ್ಷದಾಯಕವಾದ ವಿಚಾರ. ಸಾರ್ವಜನಿಕರಿಗೆ ಯೋಗವನ್ನು ತಲುಪಿಸುವ ಸಂಘ ಸಂಸ್ಥೆಗಳ ಆಸಕ್ತಿ ನಿಜಕ್ಕೂ ಶ್ಲಾಘನೀಯ ಎಂದು ಯೋಗ ನಡಿಗೆಗೆ ಶುಭ ಕೋರಿದರು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಡಾ.ರಂಗಸ್ವಾಮಿ ಮಾತನಾಡಿ, ಆರೋಗ್ಯವೇ ಭಾಗ್ಯ. ಯೋಗದಿಂದ ಎಲ್ಲರಿಗೂ ಉಚಿತವಾಗಿ ಆರೋಗ್ಯ ಸಿಗಲಿದೆ. ನಿತ್ಯ ಯೋಗಭ್ಯಾಸ ಮಾಡಿ ನಿರೋಗಿಗಳಾಗಿ ಎಂದು ಕರೆ ನೀಡಿದರು. ಜಿಲ್ಲಾ ಆಯುಷ್ ಅಧಿಕಾರಿ ಡಾ. ಚಂದ್ರಕಾಂತ್ ನಾಗಸಮುದ್ರ ಮಾತನಾಡಿ, ಆಯುಷ್ ಇಲಾಖೆ ವತಿಯಿಂದ ಯೋಗವನ್ನು ಮನೆಮನೆಗೆ ತಲುಪಿಸುವ ಕಾರ್ಯವನ್ನು ಮಾಡಲಾಗುತ್ತಿದೆ. ವೈದ್ಯ ಪದ್ಧತಿಗಳು ಚಿಕಿತ್ಸೆ ನೀಡಬಲ್ಲವೂ ಆದರೆ ಯೋಗದಿಂದ ಮಾತ್ರ ಆರೋಗ್ಯ ಪಡೆಯಲು ಸಾಧ್ಯ ಎಂದು ಹೇಳಿದರು. ಜಿಲ್ಲೆಯ ವಿವಿಧ ಯೋಗ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಯೋಗ ನಡಿಗೆ ಜಾಗೃತಿ ಜಾಥಾವು ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಪ್ರಾರಂಭವಾಗಿ, ಮದಕರಿ ವೃತ್ತ, ರಂಗಯ್ಯನಬಾಗಿಲು ಮೂಲಕ ಉಚ್ಚಂಗಿಯಲ್ಲಮ್ಮ ದೇವಸ್ಥಾನ, ಆನೆಬಾಗಿಲು, ಗಾಂಧಿ ವೃತ್ತದ ಮೂಲಕ ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಶಿಸ್ತು ಬದ್ಧವಾಗಿ ನಡೆದ ಯೋಗ ನಡಿಗೆಯು ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ಕೊನೆಗೊಂಡಿತು.

ಇದೇ ಸಂದರ್ಭದಲ್ಲಿ ಆಯುಷ್ ಇಲಾಖೆ ವತಿಯಿಂದ ಭಾಗವಹಿಸಿದ್ದ ಎಲ್ಲರಿಗೂ ಆರೋಗ್ಯಕರಕಷಾಯ ವಿತರಣೆ ಮಾಡಲಾಯಿತು. ಯೋಗ ನಡಿಗೆ ಜಾಗೃತಿ ಜಾಥಾದಲ್ಲಿ ಜಿಲ್ಲಾ ಆಯುಷ್ ಇಲಾಖೆಯ ವೈದ್ಯಾಧಿಕಾರಿ ಡಾ.ಟಿ.ಶಿವಕುಮಾರ್ ಸೇರಿದಂತೆ ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ ವರ್ಗದವರು, ಜಿಲ್ಲೆಯ ವಿವಿಧ ಯೋಗಾಸಕ್ತ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.

## ಜೂನ್ 22 ರಂದು ಎಂಸಿಎ-ಎಂಬಿಎ ಕೋರ್ಸುಗಳಿಗೆ ಪ್ರವೇಶ ಪರೀಕ್ಷೆ: ಎಡಿಸಿ



**ದಾವಣಗೆರೆ:** ರಾಜ್ಯ ಪರೀಕ್ಷಾ ಪ್ರಾಧಿಕಾರದಿಂದ ಸ್ನಾತಕೋತ್ತರ ವೃತ್ತಿಪರ ಕೋರ್ಸ್‌ಗಳಾ ಎಂಸಿಎ, ಎಂಬಿಎ ಕೋರ್ಸ್‌ಗಳ ಪ್ರವೇಶಕ್ಕೆ ಜೂನ್ 22 ರಂದು ನಗರದ 3 ಪರೀಕ್ಷಾ ಕೇಂದ್ರಗಳಲ್ಲಿ ಪ್ರವೇಶ ಪರಿಕ್ಷೆ ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ತಿಳಿಸಿದರು.ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.ಅಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30ರವರೆಗೆ ಎಂ.ಸಿ.ಎ ಕೋರ್ಸುಗೆ ಪರೀಕ್ಷೆ ನಡೆಯಲಿದ್ದು 1269 ವಿದ್ಯಾರ್ಥಿಗಳು ಪರೀಕ್ಷೆ ಬರೆಯುವರು. ಹಾಗೂ ಮಧ್ಯಾಹ್ನ 2.30 ರಿಂದ 4.30ರವರೆಗೆ ಎಂ.ಬಿ.ಎ ಕೋರ್ಸುಗೆ ಪರೀಕ್ಷೆ ನಡೆಯಲಿದ್ದು 1694 ವಿದ್ಯಾರ್ಥಿಗಳು ಪರೀಕ್ಷೆ ಬರೆಯುವರು. ಪರೀಕ್ಷೆಯಲ್ಲಿ ನಿಯಮದಂತೆ ನಡೆಸಬೇಕು, ಯಾವುದೇ ಅನುಮಾನ, ಗೊಂದಲಗಳಿಗೆ ಅವಕಾಶ ನೀಡದೆ ಪಾರದರ್ಶಕವಾಗಿ ನಡೆಸಬೇಕೆಂದು ತಿಳಿಸಿದರು. ಸಭೆಯಲ್ಲಿ ಡಿಡಿಪಿಯು ಕರಿಸಿದ್ದಪ್ಪ ಮಾತನಾಡಿ, ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಸಕಲ ಸಿದ್ದತೆಗಳನ್ನು ಕೈಗೊಂಡಿದ್ದು, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದೆ. ಪರೀಕ್ಷಾ ದಿನದಂದು ಅಗತ್ಯ ಜಾಗೃತ ದಳ ಸಿಬ್ಬಂದಿಯನ್ನು ನೇಮಸಿಲಾಗಿದೆ.ಕೇಂದ್ರಗಳಲ್ಲಿ ಕೇಂದ್ರದ ಪ್ರಾಂಶುಪಾಲರು ಸಿಸಿಟಿವಿ ಚಿತ್ರಣಗಳನ್ನ ಸಂಪೂರ್ಣವಾಗಿ ರೆಕಾರ್ಡ್ ಮಾಡಿ ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿ ಗೌಪ್ಯತಾ ಬಂಡಲು ಹಾಗೆಯೇ ಪರೀಕ್ಷಾ ಕಾರ್ಯ ಮುಕ್ತಾಯವಾದ ನಂತರ ರಹಸ್ಯ ಬಂಡಲುಗಳನ್ನು ಅಂಚೆ ಕಚೇರಿಯ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳುಹಿಸಲಾಗುವುದು.

**ಪ್ರಮುಖ ಸುದ್ದಿ**

### ಸಣ್ಣ ನೀರಾವರಿ ಮತ್ತು ನೀರಿನಾಸರೆಗಳ ಗಣತಿ ತರಬೇತಿ ಕಾರ್ಯಾಗಾರಕ್ಕೆ ಚಾಲನೆ

# ಪರಿಣಾಮಕಾರಿಯಾಗಿ ಗಣತಿ ಕಾರ್ಯ ಕೈಗೊಳ್ಳಿ: ಸಿಇಓ

» **ಚಿತ್ರದುರ್ಗ**



ವಿವಿಧ ಇಲಾಖೆಗಳ ಸಹಯೋಗದೊಂದಿಗೆ 7ನೇ ಸಣ್ಣ ನೀರಾವರಿ ಗಣತಿ ಮತ್ತು 2ನೇ ನೀರಿನಾಸರೆಗಳ ಗಣತಿ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ನಿಖರವಾದ ಮಾಹಿತಿ ಸಂಗ್ರಹಣೆಗೆ ಕ್ರಮಕೈಗೊಳ್ಳಬೇಕು ಎಂದು ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಸಂಖ್ಯಿಕ ಇಲಾಖೆ ಸಹಯೋಗದಲ್ಲಿ 7ನೇ ಸಣ್ಣ ನೀರಾವರಿ ಗಣತಿ ಮತ್ತು 2ನೇ ನೀರಿನಾಸರೆಗಳ ಗಣತಿಯ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

7ನೇ ಸಣ್ಣ ನೀರಾವರಿ ಗಣತಿ ಮತ್ತು 2ನೇ ನೀರಿನಾಸರೆಗಳ ಗಣತಿ ಕಾರ್ಯವನ್ನು ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ಯಾವುದೇ ಲೋಪ-ದೋಷ ಇಲ್ಲದಂತೆ ಮುಂಬರುವ ಅಕ್ಟೋಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.


ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿ, ಎಲ್ಲ ರೀತಿಯ ಅಂತರ್ಜಲ ಯೋಜನೆಗಳು ಮೇಲ್ಮೈ ಜಲಯೋಜನೆಗಳನ್ನು ಗ್ರಾಮವಾರು ಗಣತಿ ಕಾರ್ಯವನ್ನು ಮೊಬೈಲ್ ಆಪ್ ಮೂಲಕ ಗ್ರಾಮ ಆಡಳಿತಾಧಿಕಾರಿಗಳು ನಡೆಸಲಿದ್ದು, ಈ ಕುರಿತು ಆಯಾ ತಾಲ್ಲೂಕು ತಹಶೀಲ್ದಾರ್‌ಗಳು ಗ್ರಾಮ ಆಡಳಿತಾಧಿಕಾರಿಗಳಿಗೆ ಅಗತ್ಯ ಸಲಹೆ ಸೂಚನೆ ನೀಡಿ, ಗಣತಿ ಕಾರ್ಯ ಯಶಸ್ವಿಗೆ ಕ್ರಮವಹಿಸಬೇಕು ಎಂದು ಹೇಳಿದರು.

7ನೇ ಸಣ್ಣ ನೀರಾವರಿ ಗಣತಿ ಮತ್ತು 2ನೇ ನೀರಿನಾಸರೆಗಳ ಗಣತಿಯ ಕುರಿತು ತರಬೇತಿ ಕಾರ್ಯಗಾರವನ್ನು ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದಲ್ಲಿಯೂ ಹಮ್ಮಿಕೊಳ್ಳಲಾಗುವುದು ಎಂದು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹೆಚ್.ಜೆ.ಅಣ್ಣಪ್ಪ ಮಾಹಿತಿ ನೀಡಿದರು. ತರಬೇತಿ ಕಾರ್ಯವನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯ ಸಹಾಯಕ ನಿರ್ದೇಶಕರಾದ ಶಶಿರೇಖಾ, ಮಮತ ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎನ್.ರವಿಕುಮಾರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಾರ್ಯಪಾಲಕ ಇಂಜಿನಿಯರ್ ಕೆ.ಎಂ.ಕೃಷ್ಣ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಾರ್ಯಪಾಲಕ ಇಂಜಿನಿಯರ್ ಹನುಮಂತಪ್ಪ, ತೋಟಗಾರಿಕೆ ಉಪನಿರ್ದೇಶಕ ಎಸ್.ಬಿ.ಬೋಗಿ, ಜಿಲ್ಲಾ ಅಂತರ್ಜಲ ನಿರ್ದೇಶನಾಲಯ ಹಿರಿಯ ಭೂ ವಿಜ್ಞಾನಿ ಬಸಂತ್, ಭದ್ರಾ ಮೇಲ್ದಂಡೆ ಯೋಜನೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

# ನನ್ನ ಅಪ್ಪನಿಗೆ ಶುಭಾಶಯಗಳನ್ನು ಹೇಗೆ ಹೇಳಲಿ?

ಡಾ.ವೆಂಕಟೇಶಯ್ಯ ನೆಲ್ಲುಕುಂಟೆ
ಅವರ ಬರಹ..





ಇವನು ಕಳ್ಳ ಆಗ್ತಾನೆ ಇಲ್ಲ ಪೊಲೀಸ್ ಆಗ್ತಾನೆ ಅಂತ ಅಪ್ಪ ಹೇಳಿದ್ದರಂತೆ. ಪೊಲೀಸ್ ಆಗುವುದಕ್ಕಿಂತ ಕಳ್ಳ ಆಗಿಬಿಡಬಹುದೆ ಎಂಬ ಭಯವೇ ಅಪ್ಪನಿಗೆ ತೀವ್ರವಾಗಿದ್ದಿರಬಹುದು. ನಾನು ಅವೆರಡೂ ಆಗಲಿಲ್ಲ. ಅಪ್ಪ ಹೋದ ಮೇಲೆ ಅಮ್ಮ ನನ್ನನ್ನು ರುಬ್ಬತೊಡಗಿದಳು. ಸಣ್ಣ ದೂರು ಬಂದರೂ ಹಿಡಿದು ಕಂಬಕ್ಕೆ ಕಟ್ಟಿ ಮೆಣಸಿನ ಕಾಯಿ ಊದರ ಹಾಕುತ್ತಿದ್ದಳು. ವಯಸ್ಸಿನಲ್ಲಿ ತುಸು ಹಿರಿಯನಾಗಿದ್ದ ಗಿತ್ತಪ್ಪನಿಗೆ ಪೋರ ನೀಯಬ್ಬ ಎಂದ ಒಂದೇ ಮಾತಿಗೆ ಪ್ರಜ್ಞೆ ತಪ್ಪುವವರೆಗೆ ಹೊಗೆ ಹಾಕಿಸಿಕೊಂಡಿದ್ದೆ. ಕಡೆಗೆ ದೂರು ಹೇಳಿದ್ದ ಗಿತ್ತಪ್ಪನೇ ಓಡಿ ಬಂದು ಅಯ್ಯೊ ಸಚ್ಚಿ ಪೋತಾಡಮ್ಮ ಅಂತ ಗೋಳಾಡಿ ಬಿಡಿಸಿದ್ದ. ಅಪ್ಪನಿಲ್ಲದ ಮಕ್ಕಳು ಹಾದಿ ತಪ್ಪಬಾರದೆಂದು ಅಮ್ಮ ಕೊಟ್ಟ ಶಿಕ್ಷೆಗಳು ಬಹುಶಃ ನನ್ನ ಸುಪ್ತ ಪ್ರಜ್ಞೆಯವರೆಗೂ ಇಳಿದು ಕಾಪಾಡುತ್ತಿವೆ. ಕೆಟ್ಟ ಮಾತು, ಕೆಟ್ಟ ಯೋಚನೆಗಳು ಸುಳಿಯದಂತೆ ಕಾಪಾಡಿವೆ.

ಇದರಿಂದಾಗಿ ಕಳ್ಳನಾಗುವ ಯಾವ ಸಾಧ್ಯತೆಗಳೂ ಇಲ್ಲವಾದವು. ಬಹುಶಃ ನಾನು ಕದ್ದಿದ್ದು ಒಂದು ಪುಟ್ಟ ಹೃದಯವನ್ನು ಮಾತ್ರ. ಅದಕ್ಕೂ ಅಮ್ಮ ಸಿಟ್ಟಿಗೆದ್ದಿದ್ದಳು.

ಪೊಲೀಸಾಗುವ ಎಲ್ಲ ಅವಕಾಶಗಳೂ ಇದ್ದವು. ಅರ್ಜಿ ಭರ್ತಿ ಮಾಡುವಾಗ ಮೊದಲ ಆಪ್ಷನ್ನು ನೀಡಿ ಡಿ ವೈ ಎಸ್ ಪಿ ಎಂದು ಭರ್ತಿ ಮಾಡಿದ್ದರೆ ಐ ಪಿ ಎಸ್ ಬಂದು ನಾಲ್ಕು ವರ್ಷಗಳಾಗಿರುತ್ತಿದ್ದವು. ಸಾಹಿತ್ಯದ ಓದು ಮತ್ತಿತರ ಕಾರಣಗಳಿಂದ ಪೊಲೀಸಾಗುವುದು ಇಷ್ಟವಿರಲಿಲ್ಲ. ಹಾಗಾಗಿ ಅದೂ ತಪ್ಪಿ ಹೋಯಿತು. ಅಪ್ಪನ ಅಂದಾಜು ಸುಳ್ಳಾಯಿತು.

ಅಮ್ಮನಿಗೆ ಬೇಡದೆ ಹುಟ್ಟಿದ ಮಗುವಾದ್ದರಿಂದ ಆರಂಭದಲ್ಲಿ ತುಸು ಅಸಡ್ಡೆ ಮಾಡಿರಬೇಕು. ನಾನು ಹುಟ್ಟಿದ ನಂತರ ಹನ್ನೊಂದು ವರ್ಷ ಮಾತ್ರ ಬದುಕಿದ್ದ ಅಪ್ಪನಿಗೆ ನನ್ನ ಬಗ್ಗೆ ಯಾಕೆ ಹಾಗೆನ್ನಿಸಿತ್ತೊ ಗೊತ್ತಿಲ್ಲ. ಬಹುಶಃ ನನ್ನ ಮಹಾ ಘಟಿಂಗ ಸ್ವಭಾವವನ್ನು ಕಂಡೆ ಹಾಗೆ ಹೇಳಿದ್ದರೊ ಗೊತ್ತಿಲ್ಲ. ನಮ್ಮ ಕುಟುಂಬದ ಮೇಲೆ ಜಗಳ ಮಾಡಿ ಅಮ್ಮನ ಕಣ್ಣೊಳಗೆ ಅಳು ಬರಿಸಿದ್ದ ಚಿಕ್ಕಪ್ಪನ ಹಣೆಗೆ ಚೂಪು ಕಲ್ಲೆಸೆದು ರಕ್ತ ಸುರಿಯುವಂತೆ ಮಾಡಿದ್ದರಿಂದ ಹಾಗನ್ನಿಸಿತ್ತೊ .ಇಲ್ಲ ಗೋವಿಂದನೆಂಬ ಗೆಳೆಯನ ಜೊತೆ ಸೇರಿ ಸೀಬೆ ತೋಟದ ಮುದುಕ ಮಾಲಿಕ ಬೈದನೆಂದು ಅವನ ಬಾವಿ ಮೆಟ್ಟಿಲುಗಳ ಮೇಲೆ ದೊಡ್ಡ ಕಲ್ಲು ತಳ್ಳಿ ಮುರಿದು ಹಾಕಿದ್ದರಿಂದ ಹಾಗನ್ನಿಸಿತೊ ಅಥವಾ ಮನೆದೇವರ ಮುಡುಪಿನ ದುಡ್ಡು ಕದ್ದು ದೊಡ್ಡಮ್ಮಣ್ಣಿ ಅಂಗಡಿಯಲ್ಲಿ ಬೋಟಿ, ಚಕ್ಕುಲಿ, ಕೋಡುಬಳೆ, ಕಡ್ಡಿ ಪೆಪ್ಪರಮಿಂಟು ತಿಂದು ಏನೂ ಆಗದಂತೆ ಬಟ್ಟೆಗೆ ಒರೆಸಿಕೊಂಡು ಓಡಾಡಿದ್ದನ್ನು ನೋಡಿ ಹಾಗನ್ನಿಸಿತ್ತೊ ಅಂತೂ ಇಷ್ಟವಾಗದ ಭವಿಷ್ಯವನ್ನಂತೂ ನುಡಿದಿದ್ದರು. ಅಪ್ಪ ಶಾಸ್ತ್ರ ಹೇಳುತ್ತಿದ್ದರು. ಅವರ ಬಾಯಲ್ಲಿ ನನ್ನ ಭವಿಷ್ಯದ ಬಗ್ಗೆ ಕೆಟ್ಟ ಮಾತು ಕೇಳಿದ್ದ ಅಮ್ಮ ಸಿಕ್ಕಾಪಟ್ಟೆ ಹೆದರಿದ್ದಳು ಅಂತ ಕಾಣಿಸ್ತದೆ.

ಅಲ್ಲಿಂದಾಚೆಗೆ ಶುರುವಾಯಿತು ಸಂಕಷ್ಟದ ಸರಮಾಲೆ.

ಅಂತ ದುಃಖದ ಬದುಕು ಯಾರಿಗೂ ಬರಬಾರದು. ಯಾರ ಹಿತ್ತಿಲಲ್ಲಿ ಜೇನು ಕಳುವಾದರೂ ದೂರು ನನ್ನ ಮೇಲೆ ಬರುತ್ತಿತ್ತು. ಅದಕ್ಕೊಂದು ಕಾರಣವೂ ಇತ್ತು. ಜೇನು ದುಂಬಿಗಳು ನೀರು , ಹೂವುಗಳ ಮಕರಂದ ಕುಡಿದು ಹಾರಿ ಹೋಗುವ ದಿಕ್ಕು ಹಿಡಿದು, ಅವುಗಳು ಗೂಡು ಕಟ್ಟಿರುವ ತಾವನ್ನು ಕ್ಷಣಾರ್ಧದಲ್ಲಿ ಪತ್ತೆ ಮಾಡುತ್ತಿದ್ದೆ. ಪೊದೆಗಳನ್ನು ಏಕಾಗ್ರತೆಯಿಂದ ನೋಡಿ ಯಾವ ಜಾಗದಲ್ಲಿ ದುಂಬಿ ಇಳಿಯುತ್ತವೆ, ಅವುಗಳ ಕಾಲಲ್ಲಿರುವ ಹೂವಿನ ಹೂರಣ ನೋಡಿ ತುಪ್ಪ ಇದೆಯೊ ಇಲ್ಲವೊ, ಎನ್ನುವುದನ್ನು ಗಮನಿಸಿ ಜೇನು ಕೀಳುತ್ತಿದ್ದೆ. ಇದು ಊರಲ್ಲಿ ಹೆಮ್ಮೆಯ ವಿಷಯವಾಗುವುದರ ಬದಲು ಶಾಪವಾಗತೊಡಗಿತು. ಹಲಸಿನ ಹಣ್ಣುಗಳನ್ನೂ ಅಷ್ಟೆ. ಯಾವ ಕಾಯಿ ತುಸು ಬಣ್ಣ ಬದಲಿಸಿಕೊಂಡಿದೆ, ಅದರ ಸುತ್ತ ನಸರಿ ನೊಣಗಳು ಹಾರುತ್ತಿವೆಯೆ ಎಂದು ಗಮನಿಸಿ ಅದರ ತೊಟ್ಟಿಗೆ ಚೂಪು ಕಲ್ಲು ಬೀಸಿ ಎಸೆದು ಬೀಳಿಸುತ್ತಿದ್ದೆವು. ಬಿದ್ದ ಹಣ್ಣಿನ ತೊಟ್ಟನ್ನು ಬಾಯಲ್ಲಿ ಕಚ್ಚಿಕೊಂಡು ಎರಡೂ ಕೈ ಬೀಸಿಕೊಂಡು ಹಿಂದೆಯಿಂದ ನೋಡಿದರೆ ಬರಿಗೈಯಲ್ಲಿ ಹೋಗುತ್ತಿದ್ದಾರೆ ಮಕ್ಕಳು ಎಂಬ ಭಾವನೆ ಹುಟ್ಟಿಸುವಂತೆ ನಡೆಯುವ ಅಸಾಧ್ಯ ಕಲೆ ಗೋವಿಂದನಿಗಿತ್ತು. ಇಬ್ಬರೂ ಸೇರಿದರೆ ಪ್ರಳಯಾಂತಕ ಐಡಿಯಾಗಳು ಹೊಳೆಯುತ್ತಿದ್ದವು. 6 ವರ್ಷಕ್ಕೆ ಈಜು ಕಲಿತು 7–8 ವರ್ಷಗಳಾಗುವ ಹೊತ್ತಿಗೆ ಇಪ್ಪತ್ತು ಅಡಿ ಮೇಲಿನಿಂದ ಜಿಗಿಯುತ್ತಿದ್ದೆವು. ನಮ್ಮಿಬ್ಬರ ಘಟಿಂಗ ಬುದ್ಧಿ ನೋಡಿ ಊರ ಜನ ತಮ್ಮ ಮಕ್ಕಳನ್ನು ನಮ್ಮ ಜೊತೆ ಬಿಡುತ್ತಿರಲಿಲ್ಲ, ಅಥವಾ ಆಡಲು ಸಾಧ್ಯವಾಗದ ಮಟ್ಟಿಗೆ ಕೆಲಸಗಳಲ್ಲಿ ತೊಡಗುತ್ತಿದ್ದೆವು.

ಊರಿನಲ್ಲಿ ನಡೆದ ಎಲ್ಲ ಅನಿಷ್ಟದ ಘಟನೆಗಳು ನಮ್ಮ ತಲೆಗೆ ಸುತ್ತಿಕೊಳ್ಳುತ್ತಿದ್ದವು. ಸಾಹಸ ಮಾಡುವಾಗ ಉಂಟಾಗುತ್ತಿದ್ದ ರೋಮಾಂಚನಗಳು ಒದೆ ತಿನ್ನುವಾಗ ಮಾಯವಾಗುತ್ತಿದ್ದವು. ಇನ್ನೆಂದೂ ತಪ್ಪು ಮಾಡುವುದಿಲ್ಲ ಎಂದು ಗೋಗರೆದು ಕಠೋರ ಶಿಕ್ಷೆಯಿಂದ ಬಚಾವಾಗುತ್ತಿದ್ದೆ. ಆದರೆ ಮತ್ತದೆ ಕೆಲಸಗಳ ಪುನರಾವರ್ತನೆ. ಇಂಥ ಮಕ್ಕಳ ಮೇಲೆ ಯಾವ ತಂದೆ ತಾಯಿಗೆ ಭರವಸೆ ಹುಟ್ಟಲು ಸಾಧ್ಯ?

ಅಪ್ಪನ ಸಾವು ನನ್ನ ಬದುಕಿನ ದಾರಿಯನ್ನೆ ಬದಲಿಸಿಬಿಟ್ಟಿತು. ಹನ್ನೊಂದಕ್ಕೆ ನನ್ನ ಬಾಲ್ಯವೂ ಮುಗಿದು ಹೋಯಿತು.

50–60 ಜನರಿದ್ದ ಕೂಡು ಕುಟುಂಬ ಒಡೆದು ಬೇರೆಯಾಗಿ ಹೊಟ್ಟೆಗಿಲ್ಲದೆ, ಬಟ್ಟೆಗೂ ಪರದಾಡಿ ಹೊಟ್ಟೆ ಕಟ್ಟಿ ತುಸು ಪಿತ್ರಾರ್ಜಿತ ಆಸ್ತಿಯ ಜೊತೆಗೆ ಒಂದಿಷ್ಟು ಜಮೀನು ಕೊಂಡು ನಾನು ಹುಟ್ಟುವ ವೇಳೆಗೆ ಅಪ್ಪ ಅಮ್ಮ ಮಂಗಳೂರು ಹೆಂಚಿನ ಮನೆ ಕಟ್ಟಿದ್ದರು. ಅಪ್ಪನ ಗೆಳೆಯ ವೈಷ್ಣವರ ಪೂಜಾರಪ್ಪ ಊರಲ್ಲಿ ಉಪಾದಾನ ಸಂಗ್ರಹಿಸಿ ನಾಲ್ಕಾಣೆ, ಎಂಟಾಣೆಗೆ ಕೊಟ್ಟು ಹೋಗುತ್ತಿದ್ದನಂತೆ. ಆತನ ಬಗ್ಗೆ ಅಪ್ಪನಿಗೆ ಅಪಾರ ಪ್ರೀತಿ, ಗೌರವಗಳಿದ್ದವು. ಆದರೆ ನಾನು ಹುಟ್ಟುವ ಹೊತ್ತಿಗೆ ಮನೆಯಲ್ಲಿ ಹಸಿವಿನ ತೊಂದರೆ ತುಸು ನೀಗಿತ್ತು. ಹುಟ್ಟಿದ ಏಳು ವರ್ಷಕ್ಕೆ ಅಕ್ಕನ ಮದುವೆಯಾಯಿತು. ಎಲ್ಲವೂ ಸರಿಯಾಯಿತು ಎನ್ನುವಾಗ ಅಪ್ಪನಿಗೆ ಕರುಳಿನ ಕ್ಯಾನ್ಸರಿರುವುದು ಪತ್ತೆಯಾಯಿತು. ಮೇಷ್ಟರಾಗಿದ್ದ ಮಾವ ಮತ್ತು ಮಗನಂತಿದ್ದ ಭಾವ ಇಬ್ಬರೂ ಸೇರಿ ಕಿದ್ವಾಯಿ ಆಸ್ಪತ್ರೆಗೆ ಸೇರಿಸಿ ಆಪರೇಷನ್ನು ಮಾಡಿಸಿದ್ದರು. ತಿಂಗಳು ಗಟ್ಟಲೆ ಆಸ್ಪತ್ರೆಯಲ್ಲಿದ್ದರೂ ನಾವು ಮಕ್ಕಳ್ಯಾರೂ ಹೋಗಿ ನೋಡಲಾಗಿರಲಿಲ್ಲ. ಅಮ್ಮ ಬರೀ ಅಳುತ್ತಿದ್ದರು. ಅಮ್ಮನ ಮುಖ ನೋಡಿದಾಗ ಇನ್ನು ಯಾವ ತಪ್ಪು ಮಾಡಬಾರದೆನ್ನಿಸುತ್ತಿತ್ತು. ದುಡಿಮೆ, ಬರೀ ದುಡಿಮೆ. ದುಡಿಮೆ ತಪ್ಪಿಸಿಕೊಳ್ಳಲು ಸ್ಕೂಲಿಗೆ ಓಡುತ್ತಿದ್ದೆ. ಅಪ್ಪ ಮನೆಗೆ ಬಂದರು. ಹೊಟ್ಟೆಯ ಮೇಲೆ ಚೀಲ ಕಟ್ಟಿದ್ದರು. ಅದನ್ನು ತೊಳೆದು ಶುದ್ಧ ಮಾಡುವ ಕೆಲಸವನ್ನು ಚಿಕ್ಕ ಅಣ್ಣ ಮಾಡುತ್ತಿದ್ದ. ಅದನ್ನು ನೋಡಿ ಅಪ್ಪ ತಾನು ಬದುಕಬಾರದಿತ್ತೆಂದು ಕೊರಗುತ್ತಿದ್ದರು. ನಿಧಾನಕ್ಕೆ ಅದಕ್ಕೂ ಹೊಂದಿಕೊಂಡರು. ಅಲ್ಲಿಂದಾಚೆಗೆ ಅಪ್ಪ ಬದುಕಿದ್ದು ಮೂರು ವರ್ಷಗಳು ಮಾತ್ರ. ಅವು ನನ್ನ ಪಾಲಿಗೆ ಅತ್ಯಂತ ಅಮೂಲ್ಯ ಗಳಿಗೆಗಳು. ದನ ಕುರಿ ಎಮ್ಮೆ ಮೇಯಿಸಲು ಅಪ್ಪನ ಜೊತೆ ಹೋಗುತ್ತಿದ್ದೆ. ಮಕ್ಕಳಿಗೆ ಹೇಳಬಹುದಾದ ಕತೆಗಳನ್ನು ಹೇಳಿದರು. ಓದುವುದರ ಮಹತ್ವ ವಿವರಿಸಿದರು. ನನ್ನೊಳಗಿದ್ದ ಸಿಟ್ಟು, ವಿಷಗಳನ್ನು ನಿಧಾನಕ್ಕೆ ಹಿಂಡಿ ತೆಗೆಯುತ್ತಾ ಹೋದರು. ನಾನು ಅಪ್ಪ ಅಮ್ಮನಿಗೆ ಬೇಡದ ಮಗುವಲ್ಲ ಎಂಬ ಭಾವವನ್ನು ಸೃಷ್ಟಿಸುವ ಕೆಲಸದಲ್ಲಿ ಅಪ್ಪ ಗೆದ್ದಿದ್ದರು. ಬಹಳ ಗಂಭೀರ ಸ್ವಭಾವದ ಅಪ್ಪ ತಮಾಷೆ ಮಾಡುತ್ತಿದ್ದರು. ಕಡೆ ಕಡೆಗೆ ತಾನು ಬಹಳ ದಿನ ಬದುಕುವುದಿಲ್ಲ, ಅಮ್ಮನಿಗೆ ಕಾಟ ಕೊಡಬಾರದು, ಅವಳ ಕಣ್ಣಲ್ಲಿ ನೀರು ತರಿಸಬಾರದು ಎಂದು ಹೇಳಿ ಕಣ್ಣ ಕೊನೆಗೆ ಬಂದು ಕೂರುತ್ತಿದ್ದ ಹನಿಯನ್ನು ಹೊದ್ದುಕೊಂಡಿರುತ್ತಿದ್ದ ದುಪ್ಪಟಿಯಿಂದ ಒರೆಸಿಕೊಳ್ಳುತ್ತಿದ್ದರು. ಅಪ್ಪ ಇಲ್ಲದ ಮಗು ಹಾದಿ ತಪ್ಪಿತೆಂಬ ಕೆಟ್ಟ ಹೆಸರನ್ನು ಮಾತ್ರ ತರಬಾರದು ಎಂದು ಕುರಿ ಮೇಯಿಸುವಾಗ ಮಲ್ಲಣ್ಣನ ಮಾವಿನ ತೋಪಿನ ಬಳಿ ಆರ್ದ್ರವಾಗಿ ಮುಖ ನೋಡಿದ್ದರು. ಇಷ್ಟು ವರ್ಷಗಳ ನಂತರವೂ ಆ ನೋಟವನ್ನು ಮರೆಯಲಾಗದು ನನಗೆ.

ಯಾವ ಭೀಕರ ಹೊಡೆತಗಳು, ಅಸಂಖ್ಯಾತ ಮೆಣಸಿನ ಕಾಯಿ ಊದರಗಳೂ ನನ್ನನ್ನು ಪಳಗಿಸಲಾಗಿರಲಿಲ್ಲ. ಆದರೆ ಅಪ್ಪ, ಅಮ್ಮನ ದುಃಖ – ಸಂಕಟಗಳು ಮಾತ್ರ ಬಡಿದು ಬಡಿದು ಪಳಗಿಸಲಾರಂಭಿಸಿದವು. ಇದರ ನಡುವೆ ಮದುವೆಯಾಗಿ ಹೊಸದಾಗಿ ಬಂದಿದ್ದ ಅತ್ತಿಗೆಯ, ಅಮ್ಮನ ಒಡವೆ, ಸೀರೆಗಳನ್ನು ಕಳ್ಳರು ಮನೆಗೆ ನುಗ್ಗಿ ಕದ್ದುಕೊಂಡು ಹೋದರು. ಅಮ್ಮ ಸಂಕಟಕ್ಕೆ ಬೈದುಕೊಂಡರೆ ಒಂದಿಡೀ ಗುಂಪು ಬಂದು ಜಗಳಕ್ಕೆ ನಿಲ್ಲುತ್ತಿತ್ತು. ಆ ಗುಂಪಿಗೆ ಜಾಲಪ್ಪನವರ ಸಪೋರ್ಟಿತ್ತು. ಪೊಲೀಸರು ಅವರನ್ನು ಏನೂ ಮಾಡಲಿಲ್ಲ. ಅಪ್ಪ ಇದರಿಂದ ಇನ್ನಷ್ಟು ಜರ್ಝರಿತರಾಗಿ ಹೋದರು.

ಸಾವು ಹೇಗಿರುತ್ತದೆಂದು ಮೊದಲು ನೋಡಿದೆ.

86 ರ ಆಷಾಢ. ಪುಟ್ಟ ಮಗುವಿನ ತಾಯಿ ಅಕ್ಕ. ಅಪ್ಪ ಸುಸ್ತಾಗಿದ್ದರು. ಕ್ಯಾನ್ಸರು ಮತ್ತೆ ಒಳಗೇ ಆವರಿಸಿ ಬಿಟ್ಟಿತ್ತು. ನೋಡಬೇಕೆಂದು ಹೇಳಿ ಅಕ್ಕ ಭಾವನನ್ನು ಕರೆಸಿಕೊಂಡಿದ್ದರು. ಅಂದು ಶನಿವಾರ , ಸೂರ್ಯ ತನ್ನ ಕೆಲಸ ಮುಗಿಸಿ ಎರಡು ಗಂಟೆಯಾಗಿರಬಹುದು. ಅಪ್ಪ ಹುಟ್ಟಿದ್ದ ದಿನವೂ ಶನಿವಾರವೆ ಅಂತೆ. ಅಪ್ಪ ಮಾತಾಡುತ್ತಲೇ ಇದ್ದರು.

ಹಿಂದಿನ ರಾತ್ರಿ ' ನನ್ನ ಕತೆ ಮುಗೀತು, ಚಿಕ್ಕವರಿಬ್ಬರ ಸ್ಕೂಲು ಬಿಡಿಸಬೇಡ ಚೆನ್ನಾಗಿ ಓದ್ಸು, ಮಕ್ಕಳನ್ನು ಚೆನ್ನಾಗಿ ನೋಡ್ಕೊ, ಎಂದು ಅಮ್ಮನಿಗೆ ಹೇಳಿದ್ದರಂತೆ. ಅಣ್ಣನಿಗೆ ' ನಿಮ್ಮಮ್ಮ ಸುಖದ ಕುಟುಂಬದಲ್ಲಿ ಬೆಳೆದವಳು ನನ್ನನ್ನು ಕಟ್ಟಿಕೊಂಡು ಒಂದು ದಿನವೂ ಸುಖ ಕಾಣದೆ ಹೋದಳು, ಅವಳ ಕಣ್ಣಲ್ಲಿ ನೀರು ತರಿಸಬಾರದೆಂದು' ಹೇಳಿದ್ದರಂತೆ.

ಅಕ್ಕ ಬಂದಿದ್ದಳು. ಅವಳ ಬಾಲ್ಯದ ಕುರಿತು ತಮಾಷೆ ಮಾಡಿದರು. ನಾಲ್ಕೈದು ವರ್ಷದ ನನ್ನ ತಮ್ಮನನ್ನು ದೇವನಹಳ್ಳಿಯಿಂದ ಎಂಟು ಮೈಲಿ ಕತೆ ಹೇಳಿಕೊಂಡೆ ನಡೆಸಿಕೊಂಡು ಅಕ್ಕನ ಊರಿಗೆ ಹೋಗಿದ್ದನ್ನು ನೆನಪಿಸಿಕೊಂಡರು. ಎಲ್ಲರೂ ಊಟ ಮಾಡಿದ್ದರು. ಅಪ್ಪ ಕೂಡ ಅಂದು ಗೆಲುವಾಗಿಯೇ ತುಸು ಗಂಜಿ ಕುಡಿದಿದ್ದ ನೆನಪು. ಮಾತಾಡುತ್ತಲೇ ಇದ್ದರು. ಮನೆಯಲ್ಲಿದ್ದ ಎಲ್ಲರನ್ನೂ ಒಮ್ಮೆ ಹೆಸರು ಕೇಳಿ ಕರೆದು ನೋಡಿದರು. ಕಣ್ಣಿಂದ ನೀರು ತೊಟ್ಟಿಕ್ಕಿದವು. ಅಕ್ಕ ತನ್ನ ಸೀರೆ ಸೆರಗಿನಲ್ಲಿ ಒರೆಸಿದಳು. ಮಲಗಿದ್ದವರು ಕುಡಿಯಲು ನೀರು ಕೇಳಿದರು. ಆಗ ತಾನೆ ಮನೆಗೆ ಕರೆಂಟು ಬಂದಿತ್ತು. ಅಕ್ಕ ಕುಡಿಯಲು ನೀರು ತಂದಳು. ತಲೆಯನ್ನೆತ್ತಿ ಬಾಯೊಳಗೆ ನೀರನ್ನು ತುಸು ತುಸುವೆ ಕುಡಿಸಿದಳು. ಕಡೆಯ ಗುಟುಕು ಒಳಗೆ ಹೋಗುವ ಬದಲು ಹೊರ ಬಂತು. ತಲೆ ವಾಲಿತು. ಕೈ ಪಕ್ಕಕ್ಕೆ ಚೆಲ್ಲಿಕೊಂಡಿತು. ಅಕ್ಕ ಕಿಟಾರನೆ ಕಿರುಚಿಕೊಂಡಳು. ಮನೆ ಶೋಕದೊಳಗೆ ಮುಳುಗಿ ಹೋಯಿತು. ದಾಯಾದಿಯೊಬ್ಬ ಮನೆಯ ಹಿಂದಿನ ದಾರಿಯಲ್ಲಿ ಹಾಡು ಹೇಳಿಕೊಂಡು ಹೋದನಂತೆ. ಹಳ್ಳಿಗಳ ಕ್ರೌರ್ಯ, ಅಮಾನವೀಯತೆಗಳನ್ನು ಕಂಡುಂಡವರಿಗೆ ಅವುಗಳೆಂದೂ ಆಪ್ತವೆನ್ನಿಸುವುದಿಲ್ಲ.

ಸಾವು ಇಷ್ಟು ಸುಲಭವಾಗಿ ಬಂದು ಕರೆದೊಯ್ಯುತ್ತದೆಯೆ ಎಂದು ಈಗಲೂ ಕೆಲವೊಮ್ಮೆ ಅನ್ನಿಸುತ್ತದೆ. ಉದ್ಯೋಗಕ್ಕೆ ಸೇರಿದ ಮೇಲೆ ಗಂಡ, ಗಂಡನ ಮನೆಯವರ ಕಿರುಕುಳ, ಅತ್ಯಾಚಾರಕ್ಕೆ ಬಲಿಯಾದ ಅನೇಕ ಹೆಣ್ಣು ಮಕ್ಕಳು ಬೆಂಕಿ ಹಚ್ಚಿಕೊಂಡೊ, ವಿಷ ಕುಡಿದೊ ಸಾಯುವಾಗಿನ ಕಟ್ಟ ಕಡೆಯ ಮಾತುಗಳನ್ನು ರೆಕಾರ್ಡ್ ಮಾಡಿಕೊಳ್ಳುವ ಅತ್ಯಂತ ಸಂಕಟದ ಸಮಯದಲ್ಲಿ, ನಾನು ಹುಟ್ಟಲೇಬಾರದಿತ್ತು, ಹೊಟ್ಟೆಯಲ್ಲಿದ್ದ ನನ್ನನ್ನು ತೊಳೆದುಕೊಳ್ಳಲೆತ್ನಿಸಿದ್ದ ಅಮ್ಮನ ಪ್ರಯತ್ನ ಫಲಿಸಿಬಿಡಬೇಕಿತ್ತು ಅನ್ನಿಸಿದ್ದಿದೆ. ಒಮ್ಮೆ ಗೊಂಬೆಯಂತಹ ಸ್ನಾತಕೋತ್ತರ ಪದವಿ ಮುಗಿಸಿದ್ದ ಪುಟ್ಟ ಹೆಣ್ಣು ಮಗಳೊಬ್ಬಳು ತನ್ನ ಎರಡು ವರ್ಷದ ಪುಟ್ಟ ಮಗಳನ್ನು 'ಕ್ರೂರಿ ಗಂಡನ ಕೈಗೆ ಕೊಡಬೇಡಿ ನಿಮ್ಮ ದಮ್ಮಯ್ಯ, ಅಷ್ಟೆ ನನ್ನ ಕೋರಿಕೆ, ನನ್ನ ಕಣ್ಣ ಮುಂದೆಯೆ ಗಂಡ ಹಾದರ ಮಾಡಿದ. ಹೇಗೆ ಬದುಕಿರಲಿ ನಾನು? ದೇವರು ಅವನಿಗೆ ಜಾಸ್ತಿ ದಾಹ ಕೊಟ್ಟಿದ್ದಾನೆ ಏನು ಮಾಡಲಿ? ಏನು ಮಾಡುವುದು ಹೇಳಿ? ನೋಡಿ ಬೆಂಕಿ ಹಚ್ಚಿದ, ಇಲ್ಲ ಇಲ್ಲ ನಾನೆ ಬೆಂಕಿ ಹಚ್ಚಿಕೊಂಡೆ' ಎಂದು ನರಳಿದಳು. ಅಷ್ಟು ಹೇಳುವುದಕ್ಕೆ ಬದುಕಿದ್ದಳೇನೊ ಎಂಬಂತೆ ಕಣ್ಣ ಮುಂದೆಯೆ ಪ್ರಾಣ ಬಿಟ್ಟಳು.

ಇಂತವು ಎಷ್ಟೊ ಜೀವಗಳ ಸಂಕಟಗಳು ನನ್ನನ್ನು ಛಿದ್ರ ಮಾಡಿವೆ. ಅಂಥ ಗಳಿಗೆಗಳಲ್ಲೆಲ್ಲ ಅಪ್ಪನ ಸಾವು ಕದಡಿ ಕಾಡಿ ಕಣ್ಣ ಮುಂದೆ ನಿಲ್ಲುತ್ತದೆ.

ಅಪ್ಪ ನೋಡುವುದಕ್ಕೆ ಹೇಗಿದ್ದರು ಎಂದು ಕಲ್ಪಿಸಿಕೊಂಡರೂ ಮಬ್ಬು ಮಬ್ಬಾಗಿ ಮಾತ್ರ ನೆನಪಾಗುತ್ತದೆ. ತಮ್ಮನಿಗೆ ಒಂದಿಷ್ಟೂ ನೆನಪಿಲ್ಲ. ಅಪ್ಪನ ಫೋಟೊ ಇಂದಿಗೂ ಸಿಗಲಿಲ್ಲ. ಅಕ್ಕನ ಮದುವೆಯಲ್ಲಿ ಫೋಟೊ ತೆಗೆಸಿಕೊಂಡಿರಲಿಲ್ಲವೆ? ಆಸ್ಪತ್ರೆಯಲ್ಲಿ? ಎಲ್ಲಿಯೂ ಇಲ್ಲ. ಹೊಟ್ಟೆಯಲ್ಲಿದ್ದ ಮಗು ಹುಟ್ಟಬಾರದೆಂದು ನಾಟಿ ಔಷಧ ತಿಂದು ಬದುಕುತ್ತಾಳೊ ಇಲ್ಲವೊ ಎಂಬಂತಿದ್ದ ಅಮ್ಮನ ಫೋಟೊವನ್ನು ಅಪ್ಪನೇ ಬಲವಂತ ಮಾಡಿ ತೆಗೆಸಿದ್ದರು. ಆದರೆ ತಾನು ಮಾತ್ರ ಎಲ್ಲೂ ದಾಖಲಾಗದೆ ನಮ್ಮ ಮನಸ್ಸಿನ ಮೇಲೆ ಮಾತ್ರ ಶಾಶ್ವತ ಸಂಕಟವನ್ನು ಹೊರಿಸಿ ಹೋದರು. ಹೆತ್ತವರು, ಆಪ್ತರನ್ನು ಕಳೆದುಕೊಂಡು ಸಂಕಟ, ವಿಷಾದಗಳನ್ನು ಎದೆಯೊಳಗಿಟ್ಟು ಕಾವು ಕೊಡುತ್ತಾ ಬದುಕುವ ಯಾವ ಮಕ್ಕಳೂ ಲೋಕ ಕಂಟಕರಾಗಲಾರರೆಂಬುದು ನನ್ನ ಭಾವನೆ. ಅಪ್ಪನ ಫೋಟೊಗಾಗಿ ಎಷ್ಟು ಹುಡುಕಿದ್ದು, ಅದು ಸಿಗಲೇ ಇಲ್ಲ. ಹೈಸ್ಕೂಲಿನವರೆಗೆ ಹಣಬೆಯೆಂಬ ಊರಿನ ಸ್ಕೂಲಿನಲ್ಲಿ ಓದಿದ್ದ ಅಪ್ಪ ಸರ್ಕಾರಿ ಉದ್ಯೋಗಕ್ಕೆ ಹೋಗದೆ ಭಜನಾ ಮಂಡಳಿ ಕಟ್ಟಿಕೊಂಡು, ಹೊಲದ ಕೆಲಸ ಮಾಡಿಕೊಂಡು ಊರಿಗೆ ಉಪಕಾರಿಯಾಗಿ ಬದುಕಿದ್ದರು. ಅಪ್ಪನ ತುಂಟತನದ ಬಗ್ಗೆ ನನಗೆ ಗೊತ್ತಿರುವ ಮಾಹಿತಿ ಒಂದೆ; ಸೈಕಲ್ಲು ಕಲಿಯಲು ಬಾಡಿಗೆಗೆ ಪಡೆದು ಮೂವರು ಸ್ನೇಹಿತರು ಹತ್ತಿ ಕೂತು ಹಳ್ಳಕ್ಕೆ ಬಿದ್ದು ಅದು ಮುರಿದು ಹೋದಾಗ ತುಂಬಿದ ಕೆರೆಗೆ ಎಸೆದು ಮನೆಗೆ ಬಂದಿದ್ದರಂತೆ. ಕಡೆಗೆ ಮನೆಯಲ್ಲಿ ಒದೆ ತಿಂದು ಸೈಕಲ್ಲಿಗೆ ದುಡ್ಡು ಕಟ್ಟಿದ್ದರಂತೆ.

ಇಷ್ಟು ವರ್ಷವಾದರೂ ಅಪ್ಪ ಬೆಂಬಿಡದೆ ಕಾಡುತ್ತಲೇ ಇದ್ದಾರೆ. ನೆನಪಾಗಿ ಎದೆಯೊಳಗೆ ಕೂತು ಮಾತಾಡುತ್ತಾರೆ. ಹೊಲಕ್ಕೆ ಕೆರೆಯ ಗೋಡು ತುಂಬುವಾಗ, ತಿಪ್ಪೆಗೆ ಸೊಪ್ಪು ತುಂಬುವಾಗ, ಕಣಗಾಲದ ರಾತ್ರಿಗಳಲ್ಲಿ ನಕ್ಷತ್ರಗಳ ಹರಿವು ನೋಡುವಾಗ, ಪಟ್ಟ ಬಿಟ್ಟ ಗಾಡಿಗೆ ಪಟ್ಟ ಕಟ್ಟಿಸುವಾಗ, ಕಂಡವರ ಕಾಸಿಗೆ ಕೈಯೊಡ್ಡಬಾರದು ಎನ್ನುವಾಗ, ಯಾವ ಕಾರಣಕ್ಕೂ ಅಂತರಂಗದ ಮುಂದೆ ತಲೆಬಾಗಿಸಿ ಕ್ಷಮೆ ಕೇಳುವ ಕೆಲಸ ಮಾಡಬಾರದು ಎನ್ನುವಾಗ, ಅತ್ಯಂತ ಸಂಕಟದ ಸಮಯಗಳಲ್ಲಿ ನಗುವುದನ್ನು ಅಭ್ಯಾಸ ಮಾಡುತ್ತಿದ್ದಾಗ ಅಪ್ಪ ನೆನಪಾಗಿದ್ದಾರೆ, ನೆನಪಾಗುತ್ತಾರೆ. ಉರಿಬಿಸಿಲಿಗೆ ಅಡ್ಡ ನಿಂತ ಮಾವಿನ ಮರದಂತೆ ನನ್ನ ಅಪ್ಪ ನನ್ನ ಜೊತೆಯೇ ಬದುಕುತ್ತಿದ್ದಾರೆ.

ನನ್ನ ಪುಟ್ಟ ಮಗಳು ಅಪ್ಪಂದಿರ ದಿನಕ್ಕೆಂದು ಚಿತ್ರ ಬರೆದು ಶುಭ ಕೋರಿದಾಗ, ನನ್ನ ಅಪ್ಪನಿಗೆ ಇಂಥ ಸಂತಸ ಜೀವನದಲ್ಲಿ ಸಿಗದೆ ಹೋಯಿತಲ್ಲ ಎಂಬ ದುಃಖ ಹಿಂಡುತ್ತದೆ. ಅದು ನನ್ನ ಜೀವದ ಜೊತೆಯಲ್ಲೆ ಬದುಕುತ್ತಿದೆ.

ಹೀಗಲ್ಲದೆ

ನನ್ನ ಅಪ್ಪನಿಗೆ ನಾನು ಹೇಗೆ ಶುಭಾಶಯಗಳನ್ನು ಹೇಳಲಿ?

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T